# ಸತ್ಯವೇದ - ದೇವರ ವಾಕ್ಯ
# THE BIBLE - THE WORD OF GOD

*ವಿಭಿನ್ನ ರೀತಿಯ ಪುಸ್ತಕ :*

ಸತ್ಯವೇದವು ತುಂಬಾ ಪುರಾತನ ಪುಸ್ತಕವಾಗಿದ್ದು, ಓದುವಂತವರಲ್ಲಿ ಸಂಚಲನವನ್ನು ಉಂಟುಮಾಡುವಂತದ್ದಾಗಿದೆ. ಪ್ರಪಂಚದ ಮಾನವರಲ್ಲಿ ಯಾರು ಈ ಪುಸ್ತಕವನ್ನು ಓದುತ್ತಾರೋ ಅವರ ಜೀವನವನ್ನು ಬದಲಾವಣೆಗೊಳಿಸುತ್ತದೆ!

ಸತ್ಯವೇದವು ಯಾವ ರೀತಿಯ ಬದಲಾವಣೆಯನ್ನು ಜನರಲ್ಲಿ ತರುವಂತದ್ದಾಗಿದೆ ?, ಏಕೆ ಸತ್ಯ ವೇದವು ಅಷ್ಟು ಶಕ್ತಿಯುತವಾದ ಪುಸ್ತಕವಾಗಿದೆ ? ಹೇಗೆ ಸತ್ಯವೇದವು ಜನರಲ್ಲಿ ಸಂತೋಷವನ್ನುಂಟುಮಾಡುತ್ತದೆ ?. ಈ ಒಂದು ಕಿರು ಹೊತ್ತಿಗೆ ನಿಮಗೆ ಮೇಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುವುದರ ಜೊತೆಗೆ, ಈ ಕೆಳಗಿನ ವಿಷಯಗಳನ್ನೂ ಕೂಡ ನಿಮಗೆ ತಿಳಿಸಿಕೊಡುತ್ತದೆ.

- ಸತ್ಯವೇದವು ಎಲ್ಲಿಂದ ಬಂತು ?
- ಯಾವಾಗ ಬರೆಯಲ್ಪಟ್ಟಿತು ?
- ಸತ್ಯವೇದವು ನಂಬಿಕೆಗೆ ಅರ್ಹವಾದುದೇ ?
- ಸತ್ಯವೇದದಲ್ಲಿ ಏನೇನು ಅಡಕವಾಗಿದೆ ?
- ಯಾವ ಉದ್ದೇಶಕ್ಕಾಗಿ ಬರೆಯಲ್ಪಟ್ಟಿತು ?

*ಬರವಣಿಗೆಗಳ ಸಂಗ್ರಹ :*

ಸತ್ಯವೇದವು ಎರಡು ವಿಭಾಗಗಳನ್ನು ಹೊಂದಿದೆ. ಮೊದಲನೇ ಭಾಗ ಪುರಾತನ ಇಸ್ರಾಯಲ್ಯರು ಬರೆದಿರುವುದಾಗಿದೆ, ಇದನ್ನು ಹಳೆಯ ಒಡಂಬಡಿಕೆ (Old Testament) ಎಂದೂ, ಎರಡನೇ ಭಾಗವು ಕ್ರೈಸ್ತರ ಪವಿತ್ರ ಬರವಣಿಗೆಗಳನ್ನು ಒಳಗೊಂಡಿದ್ದು ಇದನ್ನು ಹೊಸ ಒಡಂಬಡಿಕೆ (New Testament) ಎಂದು ವಿಭಾಗಿಸಲಾಗಿದೆ.

ಸತ್ಯವೇದವನ್ನು ಒಂದೇ ಬಾರಿ ಒಬ್ಬನೇ ವ್ಯಕ್ತಿ ಬರೆದಿಲ್ಲ. ಈ ಗ್ರಂಥವನ್ನು ಹಲವಾರು ಜನ ಸಾವಿರಾರು ವರ್ಷಗಳ ಕಾಲದಲ್ಲಿ ಬರೆದಿರುವಂತಹವುದಾಗಿದೆ. ಆದರೂ ಕೂಡ ಈ ಗ್ರಂಥದಲ್ಲಿ ಬರೆದಿರುವ ಸಂದೇಶ ಒಂದೇ ರೀತಿಯಾಗಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣವೆಂದರೆ, ಒಬ್ಬನೇ ನಿಜ ದೇವರ ಪ್ರೇರಣೆಯಿಂದ ಬರೆದಿರುವ ಗ್ರಂಥವಾಗಿದೆ. ಇದನ್ನು ಈ ರೀತಿಯಾಗಿ ಹೇಳಬಹುದು, " ದೇವರು ತನ್ನ ವಾಕ್ಯಗಳನ್ನು ತನ್ನ ಪ್ರವಾದಿಗಳ ಮೂಲಕ ತಿಳಿಸಿದ್ದಾನೆ, ಆದ್ದರಿಂದ ಈ ಗ್ರಂಥ ಸತ್ಯವೇದವಾಗಿದೆ. " ಅಂದರೆ ದೇವರಿಂದ ಪ್ರೇರಿತವಾಗಿ ಬರೆದಿರುವಂತ ಏಕೈಕ ಗ್ರಂಥ **" ಸತ್ಯವೇದ "** ಆಗಿದೆ.

ಸತ್ಯವೇದವು ಮೂಲತಃ ಇಬ್ರಿಯ (Hebrew) ಮತ್ತು ಗ್ರೀಕ್ (Greek) ಭಾಷೆಯಲ್ಲಿ ಬರೆಯಲ್ಪಟ್ಟರೂ ಸಹ ಅದರಲ್ಲಿರುವ ಸಂದೇಶ ಮತ್ತು ಸಂಗತಿಗಳು ಎಲ್ಲಾ ಜನರಿಗೂ ಅನ್ವಯುವಾಗುತ್ತದೆ. ಅವರು ವಿದ್ಯಾವಂತರಾಗಿರಬಹುದು ಅಥವಾ ಅವಿದ್ಯಾವಂತರಾಗಿರಬಹುದು, ಶ್ರೀಮಂತರಾಗಿರಬಹುದು ಅಥವಾ ಬಡವರಾಗಿಬಹುದು, ಎಲ್ಲರಿಗೂ ದೇವರು ಪಕ್ಷಪಾತವಿಲ್ಲದೆ ತನ್ನ ಸಂದೇಶವನ್ನು ನೀಡಿದ್ದಾನೆ (ಅಪೋಸ್ತಲರ ಕೃತ್ಯಗಳು 10:34, ರೋಮಾಪುರದವರಿಗೆ 2:11, ಎಫೆಸದವರಿಗೆ 6:9). ದೇವರಿಗೆ ಪಕ್ಷಪಾತವಿಲ್ಲದ್ದರಿಂದ ಈ ಶುಭ ವರ್ತಮಾನ (ಸುವಾರ್ತೆ)ವನ್ನು ಎಲ್ಲಾ ರಾಷ್ಟ್ರಗಳ ಮತ್ತು ಎಲ್ಲಾ ಭಾಷೆಗಳ ಜನರಿಗೆ ಈ ಗ್ರಂಥ (ಸತ್ಯವೇದ) ದ ಮೂಲಕ ನೀಡಿದ್ದಾನೆ.

*ಪುಸ್ತಕಗಳು, ಅಧ್ಯಾಯಗಳು, ಮತ್ತು ವಚನಗಳು :*

ಸತ್ಯವೇದದಲ್ಲಿ 66 ಪುಸ್ತಕಗಳಿವೆ. ಅವುಗಳಲ್ಲಿ ಕೆಲವು ತುಂಬಾ ಚಿಕ್ಕವುಗಳು, ಅವುಗಳನ್ನು ಕೆಲವೇ ನಿಮಿಷಗಳಲ್ಲಿ ಓದಬಹುದಾಗಿದೆ. ಮಿಕ್ಕ ಪುಸ್ತಕಗಳು ದೊಡ್ಡ ಪುಸ್ತಕಗಳಾಗಿವೆ. ಓದಲು ಅನುಕೂಲವಾಗುವಂತೆ ಈ ಪುಸ್ತಕಗಳನ್ನು ಅನೇಕ ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. (ಸಾಮಾನ್ಯವಾಗಿ ಒಂದು ಪುಟದಷ್ಟು) ಮತ್ತು ವಚನಗಳಾಗಿ (ಅಂದರೆ ಒಂದು ಅಥವಾ ಎರಡು ವಾಕ್ಯಗಳು) ವಿಂಗಡಿಸಲಾಗಿದೆ.

ಸತ್ಯವೇದದಲ್ಲಿನ ವಿಷಯಗಳನ್ನು ತಿಳಿಯಲು ಪುಸ್ತಕ, ಅಧ್ಯಾಯ, ಮತ್ತು ವಚನಗಳಾಗಿ ವಿಂಗಡಿಸಲಾಗಿದೆ. ಉದಾ : ಯೆಶಾಯ 45:6 ಎಂದರೆ ಯೆಶಾಯನ ಪುಸ್ತಕ 45ನೇ ಅಧ್ಯಾಯ 6ನೇ ವಚನ ಎಂದರ್ಥ. ನಿಮ್ಮಲ್ಲಿ ಸತ್ಯವೇದ ಗ್ರಂಥವಿದ್ದರೆ, ನೀವು ಸತ್ಯವೇದದ ಪ್ರಾರಂಭದಲ್ಲಿ ಪುಸ್ತಕಗಳ ಹೆಸರು, ಅಧ್ಯಾಯಗಳ ಸಂಖ್ಯೆ ಮತ್ತು ಪುಟದ ಸಂಖ್ಯೆಯನ್ನು ಒಳಗೊಂಡ ಪಟ್ಟಿಯನ್ನು ಕೊಡಲಾಗಿದೆ. ಈ ಕಿರುಹೊತ್ತಿಗೆಯನ್ನು ನೀವು ಓದಿದಾಗ ಸತ್ಯವೇದದ ಹಲವು ವಿಷಯಗಳನ್ನು ಈ ಕಿರುಹೊತ್ತಿಗೆ ಒಳಗೊಂಡಿರುವುದು ತಿಳಿದು ಬರುತ್ತದೆ.

*ಎಲ್ಲಿ ಮತ್ತು ಯಾವಾಗ ? :*

ಹಳೆಯ ಒಡಂಬಡಿಕೆಯ ರಚನೆಯು ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲದಲ್ಲಿ ಬರೆಯಲ್ಪಟ್ಟಿದೆ. ಅದರ ಬರವಣಿಗೆ ಸುಮಾರು 3500 ವರ್ಷಗಳ ಹಿಂದೆ ಪ್ರಾರಂಭವಾಗಿ 2400 ವರ್ಷಗಳವರೆಗೂ ಇರುವ ಬರವಣಿಗೆಯನ್ನು ಒಳಗೊಂಡಿದೆ.

ಹಳೆಯ ಒಡಂಬಡಿಕೆಯು ಸಾಮಾನ್ಯವಾಗಿ ಯಹೂದ್ಯ ಬರವಣಿಗೆಕಾರರಿಂದ ಬರೆಯಲ್ಪಟ್ಟಿದ್ದರೂ ಸಹ, ಅವರುಗಳೆಲ್ಲಾ ಒಂದೇ ಕಡೆ ನೆಲಸಿದವರಾಗಿರಲಿಲ್ಲ. ಕೆಲವರು ಈಗಿನ ಇಸ್ರೇಲ್ ದೇಶದಲ್ಲಿದ್ದವರಾಗಿದ್ದರು, ಮತ್ತೆ

ಮತ್ತೆ ಕೆಲವರು ಇರಾಕ್, ಸಿರಿಯಾ, ಈಜಿಪ್ಟ್ ಮತ್ತಿತ್ತರ ದೇಶಗಳಲ್ಲಿದ್ದು ಬರೆದವರಾಗಿದ್ದಾರೆ. ಅವರು ವಾಸಿಸಿದ್ದಖತಹ ದೇಶಗಳಿಗೆ ಅಖದು ಬೇರೆ ಬೇರೆ ಹೆಸರು ಇರುವುದು ಕಖಡುಬರುತ್ತದೆ.

ಹಳೆಯ ಖಡಖಬಿಡಿಕೆಗೆ ಹೋಲಿಸಿದರೆ, ಹೊಸ ಖಡಖಬಡಿಕೆ ತುಖಬಾ ಕಡಿಮೆ ಕಾಲಾವಧಿಯಲ್ಲಿ ಅಖದರೆ, ಕೇವಲ ಖಖದು ಶತಮಾನದ ಅವಧಿಯಲ್ಲಿ, ಸುಮಾರು 2000 ವರ್ಷಖಗಳ ಹಿಖದೆ ಬರೆಯಲ್ಪಟ್ಟಿದೆ. ಈ ವಿಭಾಗವನ್ನೂ ಕೂಡ ಕೆಲವರನ್ನು ಬಿಟ್ಟು ಬಹುಪಾಲು ಯೆಹೂದ್ಯ ಬರವಣಿಗೆಕಾರರು ಬರೆದಿದ್ದಾರೆ. ಅವರಲ್ಲಿ ಕೆಲವರು ಇಸ್ರೇಲ್ ದೇಶದಲ್ಲಿ ಬರೆದರೆ , ಮತ್ತೆ ಕೆಲವರು ಟಕಿಖ, ಗ್ರೀಕ್ ಮತ್ತು ಇಟಲಿ ದೇಶಗಳಲ್ಲಿ ಬರೆದಿದ್ದಾರೆ.

ಸತ್ಯವೇದವನ್ನು ಬರೆದಿರುವವರಲ್ಲಿ ಬಹುಪಾಲು ಜನರು ಮೂಲತಃ ಲೇಖಕರಲ್ಲ ಅಥವಾ ವೃತ್ತಿಯಲ್ಲಿ ಬರಹಗಾರರಲ್ಲ. ಆದರೆ ಅವರು ಕುರುಬರು, ರಾಜರು, ವೈದ್ಯರು, ವ್ಯವಸಾಯಗಾರರು, ಮೀನುಗಾರರು ಹಾಗೂ ಇತರೆ ಕೆಲಸದವರಾಗಿರುತ್ತಾರೆ. ಈ ವ್ಯಕ್ತಿಗಳು ದೇವರಿಖದ ಕರೆಯಲ್ಪಟ್ಟು, ದೇವರ ವಾಕ್ಯಗಳನ್ನು ಸಾರುವವರಾಗಿದ್ದರು ಮತ್ತು ಅವುಗಳನ್ನು ಬರೆದಿರುವುದನ್ನು ಕಾಣಬಹುದಾಗಿದೆ.

***ಮಿಥ್ಯ ಅಥವಾ ಸತ್ಯ ? :***

ಪ್ರಪಖಚದಲ್ಲಿ ಅನೇಕ ಪುರಾತನ ಗ್ರಖಥಗಳು ಕಖಡು ಬರುತ್ತವೆ. ಆದರೆ ಅವುಗಳಲ್ಲಿ ಸತ್ಯವೇದವು ಮಿಥ್ಯ ಅಥವಾ ಸತ್ಯವಾದದ್ದು ಎಖದು ಹೇಗೆ ನಿಧಖರಿಸಬಹುದು ?

ಅನೇಕ ಮುಖ್ಯವಾದ ಕಾರಣಗಳಿಖದ ಈ ಗ್ರಖಥದ ಸಖದೇಶಗಳಲ್ಲಿ ನಾವು ಸ್ಥಿರವಾದ ನಖಬಿಕೆಯನ್ನು ಇಡಬಹುದಾಗಿದೆ.

ಮೊದಲನೆಯದಾಗಿ, ಸತ್ಯವೇದವು ನಿಖರವಾದ ಇತಿಹಾಸ ಅಥವಾ ಚರಿತ್ರೆಯನ್ನು ಖಳಗೊಖಡ ಪುಸ್ತಕವಾಗಿದೆ. ಇದರಲ್ಲಿ ದಾಖಲಾಗಿರುವ ರಾಜರುಗಳು ಮತ್ತು ಘಟನೆಗಳನ್ನು ನಾವು ಪುರಾತನ ಚರಿತ್ರೆಯಲ್ಲಿ ಸ್ಪಷ್ಟವಾಗಿ

ಮತ್ತು ಘಟನೆಗಳನ್ನು ನಾವು ಪುರಾತನ ಚರಿತ್ರೆಯಲ್ಲಿ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಇದರ ಜೊತೆಗೆ ಈ ಗ್ರಂಥದಲ್ಲಿ ಗುರುತಿಸಿರುವ ಹಲವಾರು ಸ್ಥಳಗಳನ್ನು ಈಗಲೂ ಕೂಡ ಅನ್ವೇಷಣೆ ಮಾಡಿ ಕಂಡುಹಿಡಿಯಲಾಗುತ್ತಿದೆ ; ಜೊತೆಗೆ ಅನೇಕ ಪುರಾತನ ಸ್ಥಳಗಳನ್ನು ಸತ್ಯವೇದದ ಆಧಾರದಿಂದ ಸಂಶೋಧನೆ ಮಾಡಿ ಕಂಡುಹಿಡಿದಿರುವುದನ್ನು ಕಾಣಬಹುದಾಗಿದೆ.

ಮತ್ತೂ ಮುಂದುವರೆದು ನೋಡಿದಾಗ, ಸತ್ಯವೇದವು ನಿಜವಾಗಿ ನಂಬಿಕೆಗೆ ಅರ್ಹವಾದುದಾಗಿದೆ. ಏಕೆಂದರೆ, ಈ ಗ್ರಂಥದಲ್ಲಿ ಮುಂದೆ ನಡೆಯುವ ಸಂಗತಿಗಳ ಬಗ್ಗೆಯೂ ಕೂಡ ಬಹಳ ಸ್ಪಷ್ಟವಾಗಿ ಕಾಣಬಹುದು.

ಉದಾಹರಣೆಗೆ : ಈ ದಿನಗಳಲ್ಲಿ ಇರುವಂತೆ ಸತ್ಯವೇದದ ಪುರಾತನ ಕಾಲದಲ್ಲೂ ಕೂಡ ಹಲವಾರು ದೇಶಗಳು ಇದ್ದುದನ್ನು ನೋಢಬಹುದಾಗಿದೆ. ಅವುಗಳಲ್ಲಿ ಒಂದು ದೇಶ " ಎದೋಮ್ " ಆಗಿದೆ. ಇದು ಏಸಾವನ ಸಂತತಿಯವರ ದೇಶವಾಗಿದೆ. ಆದರೆ ಇಂದು ಆ ರಾಷ್ಟ್ರ ಪ್ರಪಂಚದಿಂದ ಕಣ್ಮರೆಯಾಗಿದೆ. ಈ ವಿಷಯುವನ್ನು ದೇವರು ಬಹಳ ಮೊದಲೇ ತನ್ನ ಪ್ರವಾದಿಗಳ ಮೂಲಕ ತಿಳಿಸಿರುವುದನ್ನು ನಾವು ಸತ್ಯವೇದದಲ್ಲಿ ನೋಡಬಹುದು.

" ಏಸಾವನ ವಂಶದವರಲ್ಲಿ ಯೂರೂ ಉಳಿಯರು, ಯೆಹೋವನೇ ಇದನ್ನು ನುಡಿದಿದ್ದಾನೆ." (ಓಬದ್ಯ 1:18)

ಅದೇ ರೀತಿ ದೇವರು ಸತ್ಯವೇದದಲ್ಲಿ ಯೆಹೂದ್ಯರ ಅಥವಾ ಇಸ್ರಾಯಲ್ಯರ ವಿಷಯವಾಗಿ ಬಹಳ ನಿಖರವಾಗಿ, ಸ್ಪಷ್ಟವಾಗಿ ಈ ರೀತಿ ತಿಳಿಸಿದ್ದಾನೆ.

" ಯೆಹೋವನು ಇಂತೆನ್ನುತ್ತಾನೆ - ನಾನು ನಿನ್ನನ್ನು ರಕ್ಷಿಸಲು ನಿನ್ನೊಂದಿಗಿದ್ದೇನೆ, ನಾನು ಯಾವ ಜನಾಂಗಗಳಲ್ಲಿಗೆ ನಿನ್ನನ್ನು ಅಟ್ಟಿ ಚದುರಿಸಿದೆನೋ ಆ ಜನಾಂಗಗಳನ್ನೆಲ್ಲಾ ನಿರ್ಮೂಲ ಮಾಡುವೆನು, ನಿನ್ನನ್ನೋ ನಿರ್ಮೂಲ ಮಾಡೆನು." (ಯೆರೆಮೀಯ 30:11)

ಈ ವಿಷಯಗಳನ್ನು ನೋಡಿದಾಗ ಮೇಲೆ ತಿಳಿಸಿದ ವಿಷಯಗಳು ಮಾನವರ ಎಣಿಕೆಯಂತೆ ನಡೆದಿಲ್ಲ, ಅಥವಾ ಬರೆಸಿಲ್ಲ. ಅದೇ ರೀತಿ ಸತ್ಯವೇದದಲ್ಲಿ

ಇನ್ನೂ ಅನೇಕ ವಿಷಯಗಳನ್ನು ನೋಡಿದಾಗ, ಬಹಳ ಸ್ಪಷ್ಟವಾಗಿ ಮುಂದೆ ಆಗುವ ವಿಷಗಳನ್ನು ಅಥವಾ ಸಂಗತಿಗಳನ್ನು ಕುರಿತು ತಿಳಿಸಿರುವುದು ಕಂಡು ಬರುತ್ತದೆ.

ಸತ್ಯವೇದವು ಕೇವಲ ಕಲ್ಪನೆ ಅಥವ ಮಿಥ್ಯವಲ್ಲ ಎಂದು ಹೇಳಲು ಮತ್ತೊಂದು ಮುಖ್ಯವಾದ ಕಾರಣವೆಂದರೆ, ಈ ಗ್ರಂಥದ ಪುಸ್ತಕಗಳು ಹಲವಾರು ಬರಹಗಾರರಿಂದ, ವಿವಿಧ ಕಾಲದಲ್ಲಿ, ವಿವಿಧ ಸ್ಥಳಗಳಲ್ಲಿ ಬರೆಯಲ್ಪಟ್ಟಿದ್ದರೂ, ಈ ಗ್ರಂಥದ ಸಂದೇಶ ಮತ್ತು ದೇವರ ಬಗ್ಗೆ ಸತ್ಯ ವಿಷಯಗಳು ಏಕ ರೀತಿಯಾಗಿಯೇ ಇರುವುದನ್ನು ಕಾಣಬಹುದು.

ಸತ್ಯವೇದವು ಒಂದು ಕಾಲ್ಪನಿಕವಾದಂತಹ ಗ್ರಂಥವಲ್ಲ, ದೇವರ ಬಗ್ಗೆ ವಿಶೇಷವಾದ ಜ್ಞಾನವನ್ನು ಕೊಡುವ ಏಕೈಕ ಗ್ರಂಥವಾಗಿದೆ. (ರೋಮಾಪುರದವರಿಗೆ 16:25-26, ಎಫೆಸ 1:9, ಕೊಲೊಸ್ಸೆಯವರಿಗೆ 1:26-27).

### *ಸತ್ಯವೇದ ಏನನ್ನು ಒಳಗೊಂಡಿದೆ ? :*

ಸತ್ಯವೇದವು ದೇವರ ಬಗ್ಗೆ ಜ್ಞಾನವನ್ನು ಕೊಡುತ್ತದೆ. ಇದು ದೇವರ ಗುಣ ಲಕ್ಷಣಗಳು, ಆತನ ಉನ್ನತಿ, ಆತನ ಅಮರತ್ವ ಮತ್ತು ಆತನು ತನ್ನ ಮಕ್ಕಳ ಮೇಲೆ ಇಟ್ಟಿರುವ ಕೃಪೆಯ ಬಗ್ಗೆ ತಿಳಿಸುತ್ತದೆ. ಜೊತೆಗೆ ಎಲ್ಲಕ್ಕಿಂತ ಮುಖ್ಯವಾಗಿ ಒಬ್ಬನೇ ನಿಜ ದೇವರ ಇರುವಿಕೆಯ ಬಗ್ಗೆ ತಿಳಿಸುತ್ತದೆ.

"ನಾನೇ ಯಹೋವ, ಇನ್ನು ಯಾವನೂ ಅಲ್ಲ, ನಾನು ಹೊರತು ಇನ್ನು ಯಾವ ದೇವರೂ ಇಲ್ಲ." (ಯಶಾಯ 45:5).

ಸತ್ಯವೇದದಲ್ಲಿ ಪ್ರಾರಂಭದಿಂದ ಅಂತ್ಯದವರೆವಿಗೂ ನಾವು ದೇವರು ಭೂಮಿಯ ಮೇಲೆ ಹೊಂದಿರುವ ಸಂಬಂಧವನ್ನು ತಿಳಿಯಬಹುದಾಗಿದೆ.

### *ಜಗತ್ತಿನ ಪ್ರಾರಂಭ :*

ಸತ್ಯವೇದದ ಮೊದಲ ಪುಸ್ತಕ ***ಆದಿಕಾಂಡ*** ಆಗಿದೆ. ಈ ಪುಸ್ತಕದಲ್ಲಿ ದೇವರು ಪ್ರಾರಂಭದಲ್ಲಿ ಹೇಗೆ ಎಲ್ಲಾ ಗಿಡಮರಗಳೂ ಮತ್ತು ಪ್ರಾಣಿಗಳನ್ನು ಸೃಷ್ಟಿಸಿದ

ಎಂಬುದನ್ನು ತಿಳಿಸಿದೆ. ಜೊತೆಗೆ ಅವುಗಳು ವೃದ್ಧಿಯಾಗುವಂತೆ ಪರಿಸರವನ್ನು ಸೃಷ್ಟಿಸಿರುವುದನ್ನು ತಿಳಿಸಿದೆ.

ದೇವರು ಪ್ರಾರಂಭದಲ್ಲಿ ಇಬ್ಬರು ಮನುಷ್ಯರನ್ನು ಸೃಷ್ಟಿಮಾಡಿದ. ಅವರೆಂದರೆ ಮಾನವನಾದ ಆದಾಮ ಮತ್ತು ಹೆಣ್ಣಾದ ಹವ್ವಳು. ಅವರನ್ನು ಬೇರೆ ಎಲ್ಲಾ ಪ್ರಾಣಿಗಳಿಂದ ಬೇರ್ಪಡಿಸಿದನು, ಕಾರಣ ದೇವರು ಅವರನ್ನು ತನ್ನ ಹೋಲಿಕೆಯಲ್ಲಿ ಸೃಷ್ಟಿಸಿದ್ದನು.

***ಪಾಪ, ಶ್ರಮೆ, ಮತ್ತು ಮರಣದ ಉತ್ಪತ್ತಿ :***

ಸತ್ಯವೇದದಲ್ಲಿ ಆದಾಮ ಮತ್ತು ಹವ್ವಳನ್ನು ದೇವರು ಏದೇನ್ ವನವನ್ನು ನಿರ್ಮಿಸಿ, ಆ ವನದಲ್ಲಿ ಅವರನ್ನು ಇರಿಸಿದ್ದನೆಂದು ತಿಳಿಸುತ್ತದೆ. ಅವರು ಆಹಾರಕ್ಕಾಗಿ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದಾಗಿತ್ತು. ಆದರೆ, ಅವರು ಆ ಉದ್ಯಾನವನದ ಮಧ್ಯದಲ್ಲಿರುವ ಒಂದು ಮರದ ಹಣ್ಣನ್ನು ತಿನ್ನಬಾರದಾಗಿತ್ತು ಮತ್ತು ಮುಟ್ಟಲೂಬಾರದಾಗಿತ್ತು. ಅವರು ಆ ಮರದ ಹಣ್ಣನ್ನು ಮುಟ್ಟಿದರೆ ಅಥವಾ ತಿಂದರೆ ಮರಣ ಉಂಟಾಗುತ್ತದೆ ಎಂದು ದೇವರು ಅವರಿಗೆ ಎಚ್ಚರಿಸಿದ್ದನು.

ಭೂಮಿಯ ಮೇಲಿನ ಮೊದಲ ಮಾನವರಿಗೆ ದೇವರು ನಿಯಮವನ್ನು ಕೊಟ್ಟು, ಅವುಗಳನ್ನು ಅನುಸರಿಸುವಂತೆ ತಿಳಿಸಿದ್ದನು ; ಮತ್ತು ಆ ಆಜ್ಞೆಗಳಿಗೆ ವಿಧೇಯರಾಗಿ ನಡೆಯಲು ಅಥವಾ ಅವಿಧೇಯರಾಗುವ ಆಯ್ಕೆಯನ್ನು ಅವರ ಮುಂದೆಯೇ ಇಟ್ಟಿದ್ದನು. ದೇವರು ಮಾನವರಿಗೆ ವಿಧೇಯರಾಗಿ ಇರಲೇಬೇಕು ಎಂಬ ಬಲವಂತವನ್ನೂ ಸಹ ಮಾಡಿರಲಿಲ್ಲ. ಆದರೆ, ಅವರಿಗೆ ದೇವರ ಆಜ್ಞೆಗಳನ್ನು ಪ್ರೀತಿಮಾಡುವ, ಆತನ ನಿಯಮಗಳನ್ನು ಪಾಲಿಸುವ ಅಥವಾ ತಮ್ಮ ಇಷ್ಟಬಂದ ರೀತಿಯಲ್ಲಿ ಇರುವ ಸ್ವಾತಂತ್ರ್ಯವನ್ನು ಕೊಟ್ಟಿದ್ದನು.

ದೇವರು ಉಂಟು ಮಾಡಿದ ಉದ್ಯಾನವನದಲ್ಲಿ ಬಹಳ ಯುಕ್ತಿಯಾದ ಒಂದು ಪ್ರಾಣಿ ಇದ್ದಿತು-ಅದೇ ಸರ್ಪವಾಗಿದೆ. ದೇವರು ಆ ಸರ್ಪಕ್ಕೆ

ಮಾತನಾಡುವಂತಹ ಶಕ್ತಿಯನ್ನು ನೀಡಿದ್ದನು. ದೇವರು ತಿನ್ನಬಾರದು ಎಂದು ಆಜ್ಞಾಪಿಸಿದ್ದ ಮರದ ಹಣ್ಣನ್ನು ಕುರಿತು ಆ ಸರ್ಪವು ಸ್ತ್ರೀ ಗೆ ಆ ಮರದ ಹಣ್ಣು ತಿನ್ನಲು ಬಹಳ ಯೋಗ್ಯವಾಗಿದೆ ಮತ್ತು ಆ ಹಣ್ಣನ್ನು ತಿಂದರೆ ಮರಣ ಉಂಟಾಗುವುದಿಲ್ಲ ಎಂದು ತಿಳಿಸಿತು. ಹವ್ವಳು ಸರ್ಪದ ಮಾತನ್ನು ನಿಜವೆಂದು ನಂಬಿದಳು ಮತ್ತು ಆ ಮರದ ಹಣ್ಣನ್ನು ತಿಂದಳು ಮತ್ತು ಆದಾಮನಿಗೆ ಕೊಡಲು ಅವನೂ ಸಹ ತಿಂದನು.

ಈ ಕಾರ್ಯದ ನಿಮಿತ್ತ ಆದಾಮ ಮತ್ತು ಹವ್ವಳಿಗೆ ಶಿಕ್ಷೆಯುಂಟಾಯಿತು. ನಿಜ ದೇವರು ಅವರಿಗೆ ಎಚ್ಚರಿಕೆ ನೀಡಿದಂತೆ ಆ ಹಣ್ಣನ್ನು ತಿಂದಿದ್ದರ ಪರಿಣಾಮ ಅವರುಗಳು ಮರಣಕ್ಕೆ ಪಾತ್ರರಾದರು ಅಥವಾ ಮರ್ತ್ಯರಾದರು. ಅಲ್ಲಿಂದೀಚೆಗೆ ಮಾನವನು ಮರಣಕ್ಕೆ ಯೋಗ್ಯವಾಗಿದ್ದಾನೆ. ಜೊತೆಗೆ ದೇವರು ಮಾನವರಿಗೆ ಶ್ರಮೆಯನ್ನೂ ಕಷ್ಟವನ್ನೂ ಶಾಪವನ್ನೂ ನೀಡಿದನು. ಅವುಗಳೆಂದರೆ ಸ್ತ್ರೀಯು ಮಕ್ಕಳನ್ನು ಹೆರುವ ಕಾಲದಲ್ಲಿ ನೋವನ್ನು ಅನುಭವಿಸಬೇಕು ಮತ್ತು ಗಂಡನಿಗೆ ಅಧೀನಳಾಗಿರಬೇಕು. ಮಾನವನು ಭೂಮಿಯಲ್ಲಿ ಬೆವರು ಸುರಿಸಿ ದುಡಿಯಬೇಕು ಮತ್ತು ತನಗೆ, ಮತ್ತು ತನ್ನ ಮನೆಯವರಿಗೋಸ್ಕರ ಜೀವನ ಪರ್ಯಂತರ ಕಷ್ಟಪಟ್ಟು ದುಡಿಯಬೇಕು ಎಂಬುದೇ.

ಸರ್ಪಕ್ಕೂ ಕೂಡ ದೇವರು ಶಿಕ್ಷೆ (ಶಾಪ)ಯನ್ನು ಕೊಟ್ಟನು. ಏಕೆಂದರೆ ಸರ್ಪವು ಆದಾಮ ಮತ್ತು ಹವ್ವಳಿಗೆ ಸುಳ್ಳು ಹೇಳಿ ಮರದ ಹಣ್ಣನ್ನು ತಿನ್ನುವಂತೆ ಮಾಡಿದ್ದರ ಪರಿಣಾಮ ಶಾಪಗ್ರಸ್ತವಾಯಿತು. ಅದೂ ತನ್ನ ಜೀವಮಾನವೆಲ್ಲಾ ಹೊಟ್ಟೆಯಲ್ಲಿ ಹರಿದಾಡುವಂತೆ ಮಾಡಿದನು ಮತ್ತು ಮಾನವರಿಗೂ ಸರ್ಪಕ್ಕೂ ವಿರೋಧವಿರುವಂತೆ ದೇವರು ಶಾಪವನ್ನು ಕೊಟ್ಟನು.

***ಪಶ್ಚಾತ್ತಾಪ ಮತ್ತು ಕ್ಷಮಾಪಣೆ :***

ಸತ್ಯವೇದವು ದೇವರ ಸತ್ಯತೆ ಮತ್ತು ಕೃಪೆಯನ್ನು ತಿಳಿಸುತ್ತದೆ. ದೇವರ

ವಾಕ್ಯಗಳು ಸತ್ಯವಾದುವುಗಳಾಗಿವೆ ಮತ್ತು ದೇವರ ಮಾನವರ ಮೇಲೆ ಅಪಾರವಾದ ಪ್ರೀತಿಯನ್ನಿಟ್ಟಿದ್ದಾನೆ ; ಆತನು ಮಾನವರು ದೇವರ ನಿಯಮಗಳನ್ನು ಮೀರಿ ನಡೆಯಬಾರದು ಎಂದು ಇಷ್ಟಪಡುತ್ತಾನೆ, ಮತ್ತು ಯಾರಾದರೂ ತಪ್ಪು ಮಾಡಿದರೂ ಸಹ ನಿಜವಾಗಿ ತಮ್ಮ ಪಾಪ (ತಪ್ಪು) ಕಾರ್ಯಗಳಿಗೆ ಪಶ್ಚಾತ್ತಾಪ ಪಡುವವರನ್ನು ಆತ ಕ್ಷಮಿಸುವವನಾಗಿದ್ದಾನೆ.

ದೇವರ ನಿಯಮವನ್ನು ಮುರಿಯುವ ಮುನ್ನ ಆದಾಮ ಮತ್ತು ಹವ್ವಳು ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ. ಆದರೆ ದೇವರ ನಿಯಮಕ್ಕೆ ವಿರುದ್ಧವಾಗಿ ಪಾಪ ಮಾಡಿದ ತಕ್ಷಣ ಅವರಿಗೆ ತಮ್ಮ ಬೆತ್ತಲೆ ತನದ ಅರಿವಾಯಿತು ಮತ್ತು ನಾಚಿಕೆ ಉಂಟಾಯಿತು. ಆಗ ದೇವರು ಅವರಿಗೆ ಪ್ರಾಣಿಯನ್ನು ಕೊಂದು ಚರ್ಮದ ವಸ್ತ್ರಗಳನ್ನು ಕೊಟ್ಟನು. ಸತ್ಯವೇದದಲ್ಲಿ ಕಂಡುಬರುವ ಮರಣದಲ್ಲಿ ಈ ಪ್ರಾಣಿಯ ಮರಣವೇ ಮೊದಲ ಮರಣದ ಸಂಗತಿಯಾಗಿದೆ. ಈ ಕಾರ್ಯದಿಂದ ನಮಗೆ ತಿಳಿಯುವುದೇನೆಂದರೆ, ದೇವರು ನಮ್ಮ ಬೆತ್ತಲೆ ತನವನ್ನು ಅಥವಾ ಪಾಪಗಳನ್ನು ತಿಳಿದವನಾಗಿದ್ದು ಆತನೇ ಅದನ್ನು ಮುಚ್ಚಲು ಶಕ್ತನಾಗಿದ್ದಾನೆ. ಆದ್ದರಿಂದ ದೇವರು ಮುಂದೊಂದು ದಿನ ನಮ್ಮ ಪಾಪಗಳನ್ನು ಸಂಪೂರ್ಣವಾಗಿ ಅಳಿಸಿಹಾಕುತ್ತಾನೆ ಎಂದು ತಿಳಿಯಬಹುದಾಗಿದೆ.

*ಒಂದು ಹೊಸ ನಿರೀಕ್ಷೆ :*

ಭೂಮಿಯ ಮೇಲಿನ ಮೊದಲ ಮಾನವರಾದ ಆದಾಮ ಮತ್ತು ಹವ್ವಳು ಅವಿಧೇಯರಾಗಿ ನಡೆದು ಪಾಪ ಮಾಡಿದಾಕ್ಷಣ ದೇವರು ತನ್ನ ಯೋಜನೆಯನ್ನು ತೆಗೆದುಬಿಡಲಿಲ್ಲ. ಅಥವಾ ಕೈ ಬಿಡಲಿಲ್ಲ ಅಥವಾ ರದ್ದು ಮಾಡಲಿಲ್ಲ. ಸ್ತ್ರೀಯ ಸಂತತಿಯಲ್ಲಿ ಬರುವಂತಹ ಒಬ್ಬನು ಸರ್ಪದ ತಲೆಯನ್ನು ಜಜ್ಜುವನು ಎಂಬ ವಾಗ್ದಾನವನ್ನು ದೇವರು ಮಾಡಿದನು. ಸತ್ಯವೇದದಲ್ಲಿ ಸರ್ಪವನ್ನು ಪಾಪಕ್ಕೆ ಸಾಂಕೇತಿಕವಾಗಿ ತಿಳಿಸಲ್ಪಟ್ಟಿದೆ ; ಮತ್ತು ಯಾರು ಈ ಪಾಪದ ಪ್ರಚೋದನೆಗೆ ಒಳಗಾಗಿ ದೇವರಿಗೆ ವಿರುದ್ಧ ಕಾರ್ಯಗಳನ್ನು ಮಾಡುತ್ತಾರೋ ಅವರಿಗೆ

ಸಾಂಕೇತಿಕವಾಗಿ ತಿಳಿಸಿದೆ. ದೇವರು ಮಾಡಿದ ವಾಗ್ದಾನ ಅಂದೇ ನೆರವೇರಲಿಲ್ಲ. ದೇವರು ವಾಗ್ದಾನಮಾಡಿದ ನಾಲ್ಕು ಸಾವಿರ ವರ್ಷಗಳ ನಂತರ ವಾಗ್ದಾನದ ಶಿಶು (ಪುತ್ರ)ವಿನ ಜನನವಾಯಿತು. ಆ ವಾಗ್ದಾನದ ಪುತ್ರನೇ " ಯೇಸು " ಆಗಿದ್ದಾನೆ.

*ಹೊಸ ಪ್ರಾರಂಭ :*

ಆದಾಮ ಮತ್ತು ಹವ್ವಳಿಗೆ ಮಕ್ಕಳುಗಳಾದರು, ಮತ್ತು ಅವರ ಮಕ್ಕಳುಗಳು ಮಕ್ಕಳನ್ನು ಪಡೆದರು. ಅದರಂತೆ ಭೂಮಿಯಲ್ಲಿ ಜನಸಂಖ್ಯೆ ಹೆಚ್ಚಿತು. ಅವರುಗಳಲ್ಲಿ ಕೆಲವರು ದೇವರಿಗೆ ವಿಧೇಯರಾಗಿ ನಡೆದರು ; ಆದರೆ ಮಾನವರಲ್ಲಿ ಅತಿ ಹೆಚ್ಚು ಮಂದಿ ಅಥವಾ ಬಹುಪಾಲು ಜನರು ದೇವರಿಗೆ ಅವಿಧೇಯರಾಗಿದ್ದರು. ಆದೇರೀತಿ ಹಲವು ನೂರು ವರ್ಷಗಳ ತರುವಾಯ ಭೂಮಿಯ ಮೇಲೆ ಕೇವಲ ಒಂದೇ ಒಂದು ಕುಟುಂಬ ದೇವರಿಗೆ ವಿಧೇಯವಾಗಿತ್ತು.

ಮಾನವರು ಈ ರೀತಿಯಾಗಿ ಅವಿಧೇಯರಾದುದ್ದಕ್ಕೆ ಮತ್ತು ಕೆಟ್ಟವರಾದುದ್ದಕ್ಕೆ ದೇವರಿಗೆ ಕೋಪ ಮತ್ತು ದುಃಖ ಉಂಟಾಯಿತು. ಹಾಗಾಗಿ ಭೂಮಿಯ ಮೇಲಿನ ಎಲ್ಲಾ ಕೆಟ್ಟತನವನ್ನು ಸಂಪೂರ್ಣವಾಗಿ ನಾಶಮಾಡಲು ತೀರ್ಮಾನಿಸಿದನು. ದೇವರಿಗೆ ವಿಧೇಯರಾಗಿ ಇದ್ದ ಕುಟುಂಬದ ಮುಖ್ಯಸ್ಥನ ಹೆಸರು ನೋಹ ಆಗಿದೆ. ದೇವರು ತನ್ನ ಯೋಜನೆಯನ್ನು ನೋಹನಿಗೆ ತಿಳಿಸಿದನು, ಅದೇನೆಂದರೆ ಜಲಪ್ರಳಯದ ಮೂಲಕ ಭೂಲೋಕದ ಎಲ್ಲಾ ಜೀವಚರಗಳನ್ನು ನಾಶಪಡಿಸುತ್ತೇನೆ. ಆದ್ದರಿಂದ ನೀನು ನಿನ್ನ ಉಳಿಯುವಿಕೆಗಾಗಿ ದೊಡ್ಡದಾದ ನಾವೆ (ಹಡಗು)ಯನ್ನು ಕಟ್ಟು, ಅದರ ಮೂಲಕ ನಿನ್ನ, ನಿನ್ನ ಮನೆಯವರು ಮತ್ತು ಅನೇಕ ಪ್ರಾಣಿ ಪಕ್ಷಿಗಳ ಪ್ರಾಣಿಗಳ ಜೀವವನ್ನು ಉಳಿಸುತ್ತೇನೆ ಎಂದು ತಿಳಿಸಿದನು. (ಆದಿಕಾಂಡ 6ನೇ ಅಧ್ಯಾಯ ನೋಡಿ).

ದೇವರು ಜಲ ಪ್ರಳಯವನ್ನು ಉಂಟು ಮಾಡಿ ಭೂಮಿಯ ಮೇಲೆ ನೋಹ ಮತ್ತು ಅವನ ಕುಟುಂಬವನ್ನು ಹೊರತುಪಡಿಸಿ ಎಲ್ಲಾ ಮಾನವರನ್ನು ನಾಶ ಮಾಡಿದನು. ದೇವರ ಮಾತಿನಂತೆ ನಡೆದ ಕಾರಣದಿಂದ ನೋಹ ಮತ್ತು ಅವನ

ಕುಟುಂಬ ಉಳಿಯಿತು. (ಆದಿಕಾಂಡ 7-9ನೇ ಅಧ್ಯಾಯಗಳನ್ನು ನೋಡಿ).

ಜಲ ಪ್ರಳಯದ ನಂತರ ಮತ್ತೆ ಭೂಮಿಯಲ್ಲಿ ಜನಸಂಖ್ಯೆ ಹೆಚ್ಚುತ್ತಾ ಹೋಯಿತು. ಮೊದಲು ಜನರೆಲ್ಲಾ ಒಂದೇ ಸ್ಥಳದಲ್ಲಿ ವಾಸಿಸುವಂತವರಾಗಿದ್ದರು. ಮತ್ತು ಒಂದೇ ಭಾಷೆಯನ್ನಾಡುವರಾಗಿದ್ದರು. ಅವರುಗಳೆಲ್ಲಾ ಸೇರಿ ಒಂದು ದೊಡ್ಡ ಗೋಪುರವನ್ನು ಕಟ್ಟಲು ಪ್ರಯತ್ನ ಮಾಡಿದರು ; ಮತ್ತು ತಾವುಗಳು ದೊಡ್ಡ ಹೆಸರನ್ನು ಪಡೆಯಲು ಇಚ್ಛೆಪಟ್ಟರು. ಆದರೆ ಈ ಕಾರ್ಯ ದೇವರಿಗೆ ಇಷ್ಟವಾದ ಕಾರ್ಯವಾಗಿರಲಿಲ್ಲ, ಆದ್ದರಿಂದ ದೇವರು ಅವರ ಭಾಷೆಯನ್ನು ತಾರುಮಾರು (ಬೇರೆ ಬೇರೆ) ಮಾಡಿದನು. ಈ ಒಂದು ಕಾರಣದಿಂದ ಅಲ್ಲಿನ ಜನರು ಭೂಮಿಯ ಮೇಲಿನ ಬೇರೆ ಬೇರೆ ಸ್ಥಳಗಳಿಗೆ ಅಥವಾ ದೇಶಗಳಿಗೆ ಹೋಗಿ ಜೀವನವನ್ನು ಪ್ರಾರಂಭ ಮಾಡಿದರು. (ಆದಿಕಾಂಡ 11ನೇ ಅಧ್ಯಾಯ ನೋಡಿ).

***ದೇವರು ತನ್ನ ಉದ್ದೇಶಕ್ಕಾಗಿ ಒಂದು ದೇಶ (ಜನಾಂಗ)ವನ್ನು ಪ್ರತ್ಯೇಕಿಸಿದ್ದು.***

ಕೆಲವು ಕಾಲ ಕಳೆದ ನಂತರ, ದೇವರು ಒಬ್ಬ ನೀತಿವಂತ ಮಾನವನನ್ನು ಆರಿಸಿಕೊಂಡನು. ಅವನ ಸಂತತಿಗೆ ಒಂದು ವಿಶೇಷ ದೇಶವನ್ನು ಕೊಡುತ್ತೇನೆ ಎಂದು ವಾಗ್ದಾನ ಮಾಡಿದನು. ತಾನು ವಾಗ್ದಾನ ಮಾಡಿದ ರಕ್ಷಕನು ಆ ವಾಗ್ದತ್ತ ದೇಶದಲ್ಲೇ ಹುಟ್ಟುವನು ಎಂಬುದಾಗಿ ವಾಗ್ದಾನ ಮಾಡಿದನು.

ದೇವರು ಆರಿಸಿಕೊಂಡ ಆ ಮನುಷ್ಯನೇ ಅಬ್ರಹಾಮ ಆಗಿದ್ದಾನೆ. ಆತನು ಪುರಾತನ ಪಟ್ಟಣವಾದ "ಊರ್" ಎಂಬ ಪ್ರದೇಶದಲ್ಲಿ ವಾಸವಾಗಿದ್ದನು. ಊರ್ ಪಟ್ಟಣವು ಇಂದಿನ ಇರಾಕ್ ದೇಶದ ಪ್ರದೇಶದಲ್ಲಿ ಬರುತ್ತದೆ. ದೇವರು ಅಬ್ರಹಾಮನಿಗೆ ನೀನು ನಿನ್ನ ಬಂಧುಗಳನ್ನು, ಸ್ವಜನರನ್ನು ಬಿಟ್ಟು ನಾನು ತೋರಿಸುವ ಹೊಸ ದೇಶಕ್ಕೆ ಹೊರಟು ಹೋಗು ಎಂದು ತಿಳಿಸಿದನು.

ಆದರಂತೆ ಅಬ್ರಹಾಮನು ಯೂಫ್ರಟೀಸ್ ನದಿಯನ್ನು ದಾಟಿದನು. ಆದ್ದರಿಂದ ಅವನಿಗೆ ಮತ್ತು ಅವನ ಸಂತತಿಗೆ "ಇಬ್ರಿಯರು" ಎಂಬ ಹೆಸರು ಬಂದಿತು, ಇಬ್ರಿಯ ಎಂಬ ಪದದ ಅರ್ಥ ದಾಟಿ ಹೋದವನು ಎಂಬುದಾಗಿರುತ್ತದೆ.

ಅಬ್ರಹಾಮನು ಇಬ್ರಿಯಾ ಅಥವ ಯಹೂದಿ ಜನಾಂಗದವರ ಮೂಲ ಪಿತೃವಾಗಿದ್ದಾನೆ. ದೇವರು ಅಬ್ರಹಾಮನನ್ನು ಕಾನಾನ್ಯರು ವಾಸಮಾಡುತ್ತಿದ್ದ ದೇಶವಾದ ಕಾನಾನ್ ದೇಶಕ್ಕೆ ಬರಮಾಡಿದನು.

ಅಬ್ರಹಾಮನು ವಯೋವೃದ್ಧ (ಮುದುಕ) ನಾಗಿದ್ದರೂ ಸಹ ದೇವರು ಅವನಿಗೆ ನಿನ್ನ ಸಂತತಿಗೆ ಈ ದೇಶವನ್ನು ಶಾಶ್ವತವಾಗಿ ಕೊಡುವೆನು ಮತ್ತು ನಿನ್ನ ಸಂತತಿ ಆಕಾಶದ ನಕ್ಷತ್ರಗಳಂತೆ ಅಸಂಖ್ಯಾತವಾಗುವುದು ಎಂಬ ವಾಗ್ದಾನ ಮಾಡಿದನು. ದೇವರು ಅಬ್ರಹಾಮನಿಗೆ ಇನ್ನೊಂದು ವಾಗ್ದಾನವನ್ನೂ ಸಹ ಮಾಡಿದನು ; ಅದೇನೆಂದರೆ, " ನಿನ್ನ ಮೂಲಕ ಭೂಲೋಕದ ಎಲ್ಲಾ ಜನಾಂಗದವರಿಗೆ ಆಶೀರ್ವಾದ ಉಂಟಾಗುವುದು " ಎಂಬುದೇ ಆಗಿದೆ. ಅಬ್ರಹಾಮನ ಜೀವಿತ ಕಾಲದಲ್ಲಿ ಆತ ಎಂದೂ ಆ ವಾಗ್ದತ್ತ ದೇಶದಲ್ಲಿ ಹಕ್ಕುದಾರನಾಗಿ ವಾಸ ಮಾಡಲಿಲ್ಲ. ಆದರೆ ಅಬ್ರಹಾಮನು ಈ ವಾಗ್ದಾನದ ಫಲವನ್ನು ಮುಂದೆ ದೇವರು ಕೊಡುವುದಕ್ಕಿದ್ದಾನೆ ಎಂದು ತಿಳಿದಿದ್ದನು. ಈ ಒಂದು ನಿರೀಕ್ಷೆಯ ಸಂದೇಶವನ್ನು ಸತ್ಯವೇದದಲ್ಲಿ ಹಲವಾರು ಬಾರಿ ತಿಳಿಸಿದೆ ಮತ್ತು ಈ ನಿರೀಕ್ಷೆಯನ್ನು ಅನೇಕ ನಂಬಿಕಸ್ಥರು ಇರಿಸಿರುವುದನ್ನು ತಿಳಿಸಿದೆ. (ಇಬ್ರಿಯ 11ನೇ ಅಧ್ಯಾಯ ನೋಡಿ)

ಅಬ್ರಹಾಮನು ಇಸಾಕ ಎಂಬ ಮಗನನ್ನು ಪಡೆದನು, ಮತ್ತು ಇನ್ನೂ ಹಲವು ಸಂತತಿ ಪಡೆದು ಹಲವಾರು ರಾಜ್ಯಗಳು ಇವನಿಂದ ಉಂಟಾದವು. ಇಸಾಕನು ಯಾಕೋಬ ಎಂಬ ಮಗನನ್ನು ಪಡೆದನು. ದೇವರು ಯಾಕೋಬನನ್ನು ಇಸ್ರಾಯೇಲ್ ಎಂದು ಕರೆದನು ಮತ್ತು ತನ್ನ ಯೋಜನೆಗಳನ್ನು ನೆರವೇರಿಸಲು ಯಾಕೋಬನ ಸಂತತಿಯವರಾದ ಇಸ್ರಾಯೇಲ್ಯರನ್ನು ಆರಿಸಿಕೊಂಡನು.

ಯಾಕೋಬನ ಸಂತತಿಯವರಾದ ಇಸ್ರಾಯೇಲ್ಯರು ಕಾನಾನ್ ದೇಶದಲ್ಲಿ ಪ್ರವಾಸಿಗಳಾಗಿ ಕುರಿಗಳನ್ನು ಕಾಯುವ ಕೆಲಸ ಮಾಡಿಕೊಂಡಿದ್ದರು. ಅನಂತರ ಆ ಪ್ರದೇಶದಲ್ಲಿ ತೀವ್ರ ತರವಾದ ಬರಗಾಲ ಬಂದ ಪರಿಣಾಮ ಐಗುಪ್ತ (ಈಜಿಪ್ಟ್) ದೇಶಕ್ಕೆ ವಲಸೆ ಹೋಗಿ ಅಲ್ಲೇ ನೆಲೆ ನಿಂತರು. ಹಲವಾರು ವರ್ಷಗಳು ಕಳೆದ ನಂತರ,

ಐಗುಪ್ತ ದೇಶದವರು ಇಸ್ರಾಯೇಲ್ಯರನ್ನು ಗುಲಾಮ (ದಾಸ)ರನ್ನಾಗಿ ಮಾಡಿಕೊಂಡರು. ಆದರೆ ದೇವರು ಮೋಶೆಯ ಮುಖಾಂತರ ಇಸ್ರಾಯೇಲ್ಯರನ್ನು ಗುಲಾಮಗಿರಿಯಿಂದ ಅಂದರೆ ದಾಸತ್ವದಿಂದ ಬಿಡುಗಡೆ ಮಾಡಿದನು.

ಮೋಶೆಯ ಚರಿತ್ರೆಯನ್ನು ನಾವು ಸತ್ಯವೇದದಲ್ಲಿ 2ನೇ ಪುಸ್ತಕವಾದ ***ವಿಮೋಚನಾಕಾಂಡ*** ದಲ್ಲಿ ತಿಳಿಯಬಹುದಾಗಿದೆ. ದೇವರು ಐಗುಪ್ತರಿಗೆ ಭಯಂಕರವಾದ ವಿಪತ್ತುಗಳನ್ನು ಉಂಟುಮಾಡಿ ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಹೋಗುವಂತೆ, ಐಗುಪ್ತದ ಅರಸನಿಗೆ ತೊಂದರೆಗಳು ಉಂಟಾಗುವಂತೆ ಮಾಡಿದನು. ಮೋಶೆಯು ಇಸ್ರಾಯೇಲ್ಯರನ್ನು ಅರಣ್ಯದ ಮೂಲಕ, ವಿಶೇಷ ದೇಶವಾದ ಕಾನಾನ್ ದೇಶಕ್ಕೆ ಕರೆತಂದನು. ದೇವರು ಅವರಿಗೆ (ಇಸ್ರಾಯೇಲ್ಯರಿಗೆ) ವಿಶೇಷವಾದ ನಿಯಮ ಅಂದರೆ ಧರ್ಮಶಾಸ್ತ್ರವನ್ನು ಕೊಟ್ಟನು. ಇವುಗಳ ವಿಷಯವನ್ನು ***ಯಾಜಕಕಾಂಡ*** ಮತ್ತು ***ಧರ್ಮೋಪದೇಶಕಾಂಡ*** ಪುಸ್ತಕಗಳಲ್ಲಿ ತಿಳಿಯಬಹುದಾಗಿದೆ. ಇವುಗಳಲ್ಲಿ ಇಸ್ರಾಯೇಲ್ಯರು ಹೇಗೆ ಜೀವಿಸಬೇಕೆಂದು ತಿಳಿಸಲ್ಪಟ್ಟಿದೆ. ಮೋಶೆಯ ಮರಣದ ನಂತರ ಯೆಹೋಶುವನು ಇಸ್ರಾಯೇಲ್ಯರನ್ನು ಕಾನಾನ್ ದೇಶಕ್ಕೆ ಕರೆತಂದು ಕಾನಾನ್ಯರನ್ನು ಸೋಲಿಸಿ ಆ ದೇಶವನ್ನು ವಶಪಡಿಸಿಕೊಂಡನು. ಈ ವಿಷಯಗಳನ್ನು ಸತ್ಯವೇದದಲ್ಲಿ ***ಯಹೋಶುವನ*** ಗ್ರಂಥದಲ್ಲಿ ಓದಬಹುದಾಗಿದೆ. ಈ ರೀತಿಯಾಗಿ ವಾಗ್ದಾನದ ದೇಶವನ್ನು ದೇವರು ಇಸ್ರಾಯೇಲ್ಯರಿಗೆ ಕೊಟ್ಟನು.

ಮುಂದಿನ ಪುಸ್ತಕ **ನ್ಯಾಯ ಸ್ಥಾಪಕ** ರ ಪುಸ್ತಕವಾಗಿದ್ದು, ಇದರಲ್ಲಿ ಇಸ್ರಾಯೇಲ್ಯರು ನ್ಯಾಯ ಸ್ಥಾಪಕರ ಕಾಲದಲ್ಲಿ ಹೇಗೆ ಜೀವಿಸುತ್ತಿದ್ದರು, ಹೇಗೆ ದೇವರನ್ನು ಆರಾಧಿಸುತ್ತಿದ್ದರು ಮತ್ತು ಕೆಲವೊಮ್ಮೆ ವಿಗ್ರಹಾರಾಧನೆ ಮಾಡಿ ಹೇಗೆ ದೇವರಿಗೆ ಕೋಪವನ್ನುಂಟುಮಾಡಿದರು ಎಂಬ ವಿಷಯಗಳನ್ನು ತಿಳಿಯಬಹುದಾಗಿದೆ.

ಇಸ್ರಾಯೇಲ್ ಜನರು ಬೇರೆ ದೇಶಗಳ ಜನರ ರೀತಿಯಲ್ಲಿ ಯುದ್ಧಮಾಡಲು ನಮಗೂ ಒಬ್ಬ ಅರಸ ಬೇಕು ಎಂಬ ವಿಷಯಗಳನ್ನು 1ನೇ

ಸಮುವೇಲ ಮತ್ತು 2ನೇ ಸಮುವೇಲನ ಪುಸ್ತಕಗಳಲ್ಲಿ ನಾವು ಓದಬಹುದಾಗಿದೆ. ಆಗ ದೇವರು ಸೌಲನನ್ನು ಇಸ್ರಾಯೇಲ್ಯರ ಅರಸನನ್ನಾಗಿ ನೇಮಿಸಿದನು. ಸೌಲನು ತನ್ನ ಕಾರ್ಯವನ್ನು ಒಳ್ಳೆಯ ರೀತಿಯಲ್ಲೇ ಪ್ರಾರಂಭ ಮಾಡಿದನು. ಆದರೆ ಮುಂದೆ ದೇವರಿಗೆ ಅವಿಧೇಯನಾದುದರಿಂದ ದೇವರು ಅವನನ್ನು ತಿರಸ್ಕರಿಸಿ ತಳ್ಳಿಬಿಟ್ಟನು. ಆನಂತರ ದೇವರು ಮುಂದಿನ ಅರಸನನ್ನಾಗಿ ದಾವೀದನನ್ನು ಆರಿಸಿಕೊಂಡನು. ಆತನ ವಿಷಯವಾಗಿ " ಅವನು ನನಗೆ ಒಪ್ಪುವ ಮನುಷ್ಯನು. " (ಅಪೋಸ್ತಲರ ಕೃತ್ಯಗಳು 13:22) ಎಂದು ತಿಳಿಸಿದೆ. ದಾವೀದ ಮತ್ತು ಆತನ ಮಗನಾದ ಸೊಲೋಮೋನನು ಇಸ್ರಾಯೇಲ್ ದೇಶವನ್ನು ಮಹಾ ಸಂಸ್ಥಾನವಾಗಿ ಮಾಡಿದರು. ಯೆರುಸಲೇಮಿನಲ್ಲಿ ಸತ್ಯದೇವರ ದೇವಾಲಯ ನಿರ್ಮಾಣವಾಯಿತು. ಎಲ್ಲಾ ಜನರು ಆ ನಿರ್ಮಾಣಕ್ಕೆ ಕಾಣಿಕೆ ಕೊಟ್ಟರು. ಮತ್ತು ದೇವರ ಮಹಿಮೆ ಭೂಲೋಕದ ರಾಜ್ಯದ ಮೇಲೆ ಇರುವುದನ್ನು ನೋಡಿದರು. ದಾವೀದನು ಕೇವಲ ಒಬ್ಬ ರಾಜನಾಗಿರಲಿಲ್ಲ ಜೊತೆಗೆ ಅತ್ಯುತ್ತಮ ಕೀರ್ತನೆಕಾರ ಕೂಡ ಆಗಿದ್ದಾನೆ. ಆತನ ರಚನೆಗಳನ್ನು ನಾವು ಸತ್ಯವೇದದಲ್ಲಿ " ಕೀರ್ತನೆಗಳು " ಎಂಬ ಪುಸ್ತಕದಲ್ಲಿ ನೋಡಬಹುದಾಗಿದೆ.

ದುಃಖಕರ ಸಂಗತಿಯೆಂದರೆ ದಾವೀದ ಮತ್ತು ಸೊಲೋಮೋನನ ನಂತರ ಬಂದಂತಹ ರಾಜರುಗಳು ಒಳ್ಳೆಯವರಾಗಿರಲಿಲ್ಲ. ಸೊಲೋಮೋನನ ನಂತರ ಇಸ್ರಾಯೇಲ್ ರಾಜ್ಯವು ಉತ್ತರ ಮತ್ತು ದಕ್ಷಿಣ ರಾಜ್ಯಗಳಾಗಿ ಎರಡು ಭಾಗವಾಗಿ ಹೋಯಿತು. ಇವುಗಳ ವಿಷಯವನ್ನು ನಾವು ***1ನೇ ಅರಸುಗಳು ಮತ್ತು 2ನೇ ಅರಸುಗಳ*** ಪುಸ್ತಕದಲ್ಲಿ ಓದಬಹುದಾಗಿದೆ.

ಉತ್ತರ ಭಾಗದ ಇಸ್ರಾಯೇಲ್ ರಾಜ್ಯದ ಅರಸುಗಳಲ್ಲಿ ಒಬ್ಬನಾದರೂ ದೇವರಿಗೆ ವಿಧೇಯನಾಗಿ ನಡೆಯಲಿಲ್ಲ. ದೇವರು ಅನೇಕ ಪ್ರವಾದಿಗಳನ್ನು, ಅಂದರೆ - ಯೆಹೆಜ್ಕೇಲ, ಹೋಶೇಯ, ಮತ್ತು ಅಮೋಸ ಮತ್ತಿತರರನ್ನು ಕಳುಹಿಸಿ ತನ್ನ ಮಾರ್ಗವನ್ನು ತಿಳಿಸಿದರೂ ಸಹ ದೇವರ ಮಾತನ್ನು ಅವರು ಕೇಳಲಿಲ್ಲ. ಪರಿಣಾಮವಾಗಿ ಉತ್ತರದ ಇಸ್ರಾಯೇಲ್ ರಾಜ್ಯವನ್ನು ಅಶ್ಶೂರ್ಯ

(ಅಸ್ಸೀರಿಯನ್ನರು) ರು ಆಕ್ರಮಣ ಮಾಡಿ ಇಸ್ರಾಯೇಲ್ಯರನ್ನು ಸರಿಯಾಗಿ ತೆಗೆದುಕೊಂಡು ಹೋದರು.

ದಕ್ಷಿಣದ ರಾಜ್ಯವಾದ ಯಹೂದ ಸಂಸ್ಥಾನದ ರಾಜರುಗಳಲ್ಲಿ ಒಳ್ಳೆಯವರು ಇದ್ದರು. ಆದರೆ ಅವರಲ್ಲಿ ಕೆಲವರು ದೇವರಿಗೆ ಅವಿಧೇಯರಾಗಿ ನೆಡೆದಿರುವುದನ್ನು ನೋಡಬಹುದು. ದೇವರು ಹಲವಾರು ಪ್ರವಾದಿಗಳನ್ನು ಅಂದರೆ - ಯೆಶಾಯ, ಯೆರೆಮೀಯ, ಮತ್ತು ಮೀಕ ಮುಂತಾದವರ ಮೂಲಕ ಎಚ್ಚರಿಸಿದರೂ ದಕ್ಷಿಣ ಭಾಗದ ಯೆಹೂದ್ಯರೂ ಸಹ ದೇವರಿಗೆ ವಿಧೇಯರಾಗಲಿಲ್ಲ. ಅದರ ಪರಿಣಾಮವಾಗಿ ಬಾಬೆಲ್ (ಬ್ಯಾಬಿಲೋನಿಯನ್ನರು) ರಾಜರು ಯೆಹೂದ್ಯರನ್ನು ಸೆರೆಹಿಡಿದುಕೊಂಡು ಗುಲಾಮರನ್ನಾಗಿ ತೆಗೆದುಕೊಂಡು ಹೋದರು.

ಅನಂತರದ ಪುಸ್ತಕಗಳಾದ ಎಜ್ರ ಮತ್ತು ನೆಹೆಮಿಯನ ಪುಸ್ತಕಗಳಲ್ಲಿ, ಯೆಹೂದ್ಯರು ಬಾಬೆಲ್ ದೇಶದಿಂದ ಇಸ್ರಾಯೇಲ್ ದೇಶಕ್ಕೆ ಹಿಂತಿರುಗಿ ಬರುವುದನ್ನೂ ಮತ್ತು ಯರುಸಲೇಮಿನಲ್ಲಿ ದೇವಾಲಯವನ್ನು ಪುನಃ ಕಟ್ಟುವುದನ್ನು ಓದಬಹುದು, ಆದರೆ ಸೊಲೋಮೋನ ಕಟ್ಟಿಸಿದಷ್ಟು ಭವ್ಯತೆ ಈಗಿನ ದೇವಾಲಯದಲ್ಲಿ ಇರಲಿಲ್ಲ.

*ವಾಗ್ದಾನದ ರಕ್ಷಕ :*

ಆನಂತರ ಇಸ್ರಾಯೇಲ್ ದೇಶವನ್ನು ಪರ್ಶಿಯನ್ನರು, ನಂತರ ಗ್ರೀಕರು ಮತ್ತು ಅಂತಿಮವಾಗಿ ರೋಮನ್ನರು ಆಳ್ವಿಕೆ ನಡೆಸಿದರು. ಯೆರುಸಲೇಮಿನಲ್ಲಿ ಯಹೂದ್ಯ ಅರಸನಿರಲಿಲ್ಲ ; ಏಕೆಂದರೆ, ದೇವರು ಮೊದಲೇ ತಿಳಿಸಿದಂತೆ (ಯೆಹೆಜ್ಕೇಲ 21:27) “ ಆತನು ಆರಿಸುವ ರಾಜನು ಬರುವವರೆಗೆ ಯಹೂದ ಅರಸರ ಆಳ್ವಿಕೆ ಇರುವುದಿಲ್ಲ ” ಎಂದು ತಿಳಿಸಿದ್ದಾನೆ.

ಹಲವಾರು ತಲೆಮಾರುಗಳ ನಂತರ - ಪ್ರವಾದಿಗಳು ಮುಂತಿಳಿಸಿದಂತೆ ಮತ್ತು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದಂತೆ ಒಬ್ಬ ರಕ್ಷಕ ಬರುತ್ತಾನೆ.

ಅವನಿಗೆ "ಮೆಸ್ಸೀಯ ಅಥವಾ ಕ್ರಿಸ್ತ" ಎಂಬ ಹೆಸರಿರುತ್ತದೆ. ಈ ಎರಡೂ ಪದದ ಅರ್ಥ ಅಭಿಷೇಕಿಸಲ್ಪಟ್ಟವನು ಎಂಬುದಾಗಿದೆ. ಏಕೆಂದರೆ ದೇವರು ಆತನನ್ನು ರಾಜನಾಗಿ ಪ್ರಪಂಚವನ್ನು ಆಳಲು ಅಭಿಷೇಕಿಸಿದ್ದಾನೆ.

*ಯೇಸುವಿನ ಜನನ :*

ಹೊಸ ಒಡಂಬಡಿಕೆಯಲ್ಲಿ ಮತ್ತಾಯ ಮತ್ತು ಲೂಕನ ಸುವಾರ್ತೆಗಳು ಇಸ್ರಾಯೇಲ್ ದೇಶದ ಕನ್ಯೆಯಾದ ಮರಿಯಳು ದೇವರು ಪವಿತ್ರ ಶಕ್ತಿಯಿಂದ ಯೇಸು ಕ್ರಿಸ್ತನನ್ನು ಪಡೆದಳು ಮತ್ತು ಈ ಕಾರ್ಯದಿಂದ ಯೇಸು ದೇವರ ಮಗನಾಗಿದ್ದಾನೆ ಎಂದು ತಿಳಿಸಿವೆ. ಯೇಸು ಮನುಷ್ಯ ಕುಮಾರನು ಕೂಡ ಹೌದು, ಏಕೆಂದರೆ ಆತನ ತಾಯಿಯಾದ ಮರಿಯಳು ಸಾಮಾನ್ಯ ಮಾನವಳಾಗಿದ್ದಳು. ಆತನ ಜೀವಮಾನ ಕಾಲದಲ್ಲೆಲ್ಲಾ ನಮ್ಮಗಳಂತೆಯೇ ಎಲ್ಲಾ ರೀತಿಯ ಸಮಸ್ಯೆಗಳು, ಮತ್ತು ಶೋಧನೆಗಳಿಗೆ ಒಳಗಾಗಿದ್ದನು.

ಯೇಸುವಿನ ತಾಯಿಯಾದ ಮರಿಯಳನ್ನು ದೇವರಲ್ಲಿ ಭಯಭಕ್ತಿ ಉಳ್ಳ ಮನುಷ್ಯನಾದ ಯೋಸೇಫ ಎಂಬುವನೊಂದಿಗೆ ನಿಶ್ಚಯಮಾಡಲಾಗಿತ್ತು. ದೇವರು ತನ್ನ ದೂತನ ಮುಖಾಂತರ ಮರಿಯಳಲ್ಲಿ ಬೆಳೆಯುತ್ತಿರುವ ಶಿಶು ಪವಿತ್ರ ಶಕ್ತಿಯಿಂದ ಜನಿಸುವಂತದು ಎಂದು ತಿಳಿಸಿದನು. ಅನಂತರ ಯೇಸುವಿನ ಜನನ ಕಾಲ ಬಂದಾಗ, ಯೋಸೇಫ ಮತ್ತು ಮರಿಯಳು ಇಬ್ಬರೂ ಖಾನೇಷುಮಾರಿ (ಜನಗಣತೆ) ಗೋಸ್ಕರ ಬೇತ್ಲೆಹೇಮು ಎಂಬ ಸ್ವ ಗ್ರಾಮಕ್ಕೆ ಬಂದರು. ಆ ಸಂದರ್ಭದಲ್ಲಿ ಅವರಿಗೆ ಇಳಿದುಕೊಳ್ಳಲು ಸ್ಥಳಾವಕಾಶ ಸಿಕ್ಕದ ಕಾರಣ ಒಂದು ಕುರಿಗಳ ಕೊಟ್ಟಿಗೆಯಲ್ಲಿ ಇಳಿದುಕೊಂಡರು. ಆ ಕೊಟ್ಟಿಗೆಯಲ್ಲೇ ಯೇಸುಕ್ರಿಸ್ತನು ಜನಿಸಿದನು, ಮತ್ತು ತನ್ನ ಜೀವಿತದ ಮೊದಲ ರಾತ್ರಿಯನ್ನು ಗೋದಲಿಯಲ್ಲಿ ಕಳೆದನು. ಈ ರೀತಿಯಲ್ಲಿ ಪ್ರಪಂಚವನ್ನೇ ರಕ್ಷಿಸಲು ಬಂದಂತಹ ರಕ್ಷಕ ಅತ್ಯಂತ ಕಠಿಣಕರ ಸನ್ನಿವೇಶದಲ್ಲಿ, ಬಡಸ್ಥಿತಿಯಲ್ಲಿ ಜನಿಸಬೇಕಾಯಿತು.

*ಯೇಸುವಿನ ಭೋದನೆ ಮತ್ತು ಕಾರ್ಯ :*

ರಕ್ಷಕನಾದ ಯೇಸು ಇಸ್ರಾಯೇಲ್ ದೇಶದ ಉತ್ತರ ಭಾಗದಲ್ಲಿರುವ ನಜರೇತ್ ಎಂಬ ಸಣ್ಣ ಹಳ್ಳಿಯಲ್ಲಿ ತನ್ನ ಬಾಲ್ಯವನ್ನು ಕಳೆದನು. ಆತನ ತಂದೆಯಾದ ಯೋಸೇಫ ಬಡಗಿ (ಮರಗೆಲಸ) ಕೆಲಸದವನಾಗಿದ್ದನು. ತನ್ನ ತಂದೆಯಿಂದ ಯೇಸು ತನ್ನ ತಂದೆಯ ಕಾರ್ಯಗಳನ್ನು ಚನ್ನಾಗಿ ಕಲಿತನು. ಆತನಿಗೆ 30 ವರ್ಷಗಳು ತುಂಬಿದ ನಂತರ ಭೋದಿಸಲು ಪ್ರಾರಂಭಿಸಿದನು. ಯೇಸುವಿನ ಭೋದನೆ ಯಾವುದಾಗಿತ್ತು ಎಂದರೆ - ಮುಂದೆ ಬರುವಂತಹ ದೇವರ ರಾಜ್ಯವನ್ನು ಕುರಿತು ಭೋದಿಸುತ್ತಿದ್ದನು. ದೇವರ ಪವಿತ್ರ ಶಕ್ತಿಯಿಂದ ಯೇಸು ಅನೇಕ ರೋಗಿಗಳನ್ನು ಗುಣಪಡಿಸಿದನು ; ಮತ್ತು ಯಾರು ಆತನ ಮಾತು (ವಾಕ್ಯ) ಗಳಿಗೆ ಕಿವಿಗೊಟ್ಟು ಕೇಳಿ ನಂಬಿದರೋ ಅವರಿಗೆ ಜೀವದ ಮಾರ್ಗವನ್ನು ಭೋದಿಸಿದನು. ಮತ್ತು ದೇವರ ರಾಜ್ಯಕ್ಕೆ ಬಾದ್ಯರಾಗಲು ಬೇಕಾಗುವ ಅಂಶಗಳನ್ನು ತಿಳಿಸಿದನು. ಯೇಸುಕ್ರಿಸ್ತ ದೇವರನ್ನು *ತಂದ* ಎಂದು ತಿಳಿಸಿಕೊಟ್ಟನು. ಆದ್ದರಿಂದ ತನ್ನ ಶಿಷ್ಯರಿಗೆ ಪ್ರಾರ್ಥನೆ ಮಾಡುವಾಗ ನಮ್ಮ ತಂದೆ ಎಂದು ಹೇಳಿ ಪ್ರಾರ್ಥಿಸುವಂತೆ ತಿಳಿಸಿಕೊಟ್ಟನು.

12 ಜನ ಶಿಷ್ಯರು ಯೇಸುವನ್ನು ಹಿಂಬಾಲಿಸಿದರು. ಆತ ಅವರೊಟ್ಟಿಗೆ ಇಸ್ರಾಯೇಲ್ ದೇಶವನ್ನೆಲ್ಲಾ ಸಂಚರಿಸಿ, ದೇವರ ರಾಜ್ಯದ ಮಾರ್ಗವನ್ನು ಇಸ್ರಾಯೇಲ್ ಜನತೆಗೆ ತೋರಿಸಿಕೊಟ್ಟನು. ಆದರೆ ಯಹೂದ್ಯರ ಮುಖಂಡರುಗಳು ಯೇಸುವನ್ನು ದ್ವೇಷಿಸತೊಡಗಿದರು. ಏಕೆಂದರೆ ಅನೇಕ ಜನರು ಯೇಸುವನ್ನು ಹಿಂಬಾಲಿಸುವುದನ್ನು ಸಹಿಸದೆ ಆತನನ್ನು ಕೊಲ್ಲಲು ಪಿತೂರಿಯ ಪ್ರಯತ್ನ ಮಾಡಿದರು.

ಯೇಸುಕ್ರಿಸ್ತ ತನ್ನ ಬೋಧನೆಗಳನ್ನು ಸಾಮ್ಯಗಳು ಅಥವ ಹೋಲಿಕೆಗಳು, ಕಥೆಗಳ ಮೂಲಕ ತಿಳಿಸುತ್ತಿದ್ದನು ಅವುಗಳನ್ನು ತನ್ನ ಶಿಷ್ಯರಿಗೆ ಬಿಡಿಸಿ ಹೇಳುತ್ತಿದ್ದನು. ಈ ಸಾಮ್ಯಗಳು ಯಾವಾಗಲು ದೇವರ ರಾಜ್ಯ ಭೂಮಿಯ ಮೇಲೆ ಮುಂದೆ ಸ್ಥಾಪನೆಯಾಗುವುದನ್ನು ಕುರಿತಿರುವುಗಳಾಗಿದ್ದವು ಮತ್ತು ಯಾರು ಆ ರಾಜ್ಯದಲ್ಲಿ

ಸೇರುತ್ತಾರೆ, ಆ ರಾಜ್ಯ ಹೇಗಿರುತ್ತದೆ ಮತ್ತು ನಾವು ಆ ರಾಜ್ಯಕ್ಕೆ ಬಾದ್ಯರಾಗಲು ಹೇಗೆ ತಯಾರಾಗಿರಬೇಕು ಎಂಬ ವಿಷಯಗಳನ್ನು ಕುರಿತದ್ದಾಗಿರುತ್ತಿತ್ತು. ಯೇಸು ಕ್ರಿಸ್ತನ ಜೀವಿತ, ಬೋಧನೆ ಮತ್ತು ಆತನ ಕಾರ್ಯಗಳನ್ನು ಕುರಿತು ಸತ್ಯವೇದದ ಹೊಸ ಒಡಂಬಡಿಕೆಯಲ್ಲಿ ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನ ಸುವಾರ್ತೆಗಳಲ್ಲಿ ವಿವರವಾಗಿ ಬರೆಯಲ್ಪಟ್ಟಿದೆ.

ಸುಮಾರು ಮೂರುವರೆ ವರ್ಷಗಳ ಕಾಲದ ಬೋಧನೆಯ ನಂತರ, ಇಸ್ರಾಯೇಲ್ಯರ ಮಹಾಯಾಜಕ ಮತ್ತು ಅಧಿಕಾರಿಗಳು ಯೇಸುಕ್ರಿಸ್ತನನ್ನು ಹಿಡಿದು ಅವನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿದರು ಮತ್ತು ಆತನಿಗೆ ಮರಣ ದಂಡನೆ ಆಗಬೇಕು ಎಂದು ಆಗ್ರಹಿಸಿದರು. ಬಹಳ ಬೇಗ ಸಣ್ಣ ವಿಚಾರಣೆಯನ್ನು ನಡೆಸಿ, ಸುಳ್ಳು ಸಾಕ್ಷಿ ಹೇಳಿಸಿ ರೋಮ್ ಸಾಮ್ರಾಜ್ಯದ ಅಧಿಕಾರಿಗೆ ಯೇಸುವನ್ನು ಒಪ್ಪಿಸಿಕೊಟ್ಟರು. ಮತ್ತು ಆತನ ಮರಣ ದಂಡನೆಗೆ ಪಟ್ಟು ಹಿಡಿದರು. ಈ ವಿಚಾರ ರೋಮ್ ಅಧಿಕಾರಿಗೆ ಸ್ವಲ್ಪ ಇರಿಸು ಮುರಿಸಾದರೂ ಯೇಸುವನ್ನು ರೋಮನ್ನರ ಪದ್ಧತಿಯಲ್ಲಿ ಮರಣ ಶಿಕ್ಷೆಯನ್ನು, ಅಂದರೆ ಮರದ ಕಂಬಕ್ಕೆ ಮಾನವನನ್ನು ಮೊಳೆ ಹೊಡೆದು ನೇತು ಹಾಕಿ ಆತ ನರಳಿ ನರಳಿ ಸಾಯುವಂತೆ ಮಾಡುವುದಾಗಿದೆ. ಯೇಸುಕ್ರಿಸ್ತ ಪಾಪರಹಿತವಾಗಿ ಮರಣವನ್ನು ಹೊಂದಿದನು ಆತ ಎಂದಿಗೂ ದೇವರಿಗೆ ಅವಿಧೇಯನಾಗಿ ನಡೆಯಲಿಲ್ಲ. ಆದರೂ ಮರಣವನ್ನು ಹೊಂದಿ ಮಾನವರು ಮರಣಕ್ಕೆ ಪಾತ್ರರು ಎಂಬುದನ್ನು ತೋರಿಸಿಕೊಟ್ಟನು.

**ಪುನರುತ್ಥಾನ :**

ಯೇಸುವಿನ ಮರಣದ ಮೂರು ದಿನಗಳ ನಂತರ ದೇವರು ಯೇಸುವಿಗೆ ಪುನರುತ್ಥಾನ ನೀಡಿ ತಿರುಗಿ ಜೀವಿಸುವಂತೆ ಮಾಡಿದನು. ಆದರೆ ಯೇಸುವನ್ನು ಕೊಂದಂತಹ ಯಹೂದ್ಯರು ಯೇಸುವಿನ ದೇಹವು ಕಾಣೆಯಾಗಿದೆ ಎಂದು ಸುಳ್ಳು ಹೇಳಿಸಿದರು. ಆದರೆ ಯೇಸುವಿನ ಶಿಷ್ಯರು ಆತನು ಬದುಕಿ ಬಂದಿದ್ದಾನೆ

ಎಂಬುದನ್ನು ಸಾರಿ ಹೇಳಿದರು.

ಯೇಸು ಕ್ರಿಸ್ತ ತನ್ನ ಪುನರುತ್ಥಾನವಾದ ನಂತರ ಸ್ವಲ್ಪ ದಿನಗಳು ಕಳೆದ ನಂತರ, ತಾನು ಪರಲೋಕಕ್ಕೆ ಏರಿ ಹೋಗುವುದಕ್ಕಿಂತ ಮುಂಚಿತವಾಗಿ ಸುಮಾರು ಐದುನೂರು ಮಂದಿ ಶಿಷ್ಯರಿಗೆ ಏಕಕಾಲಕ್ಕೆ ತನ್ನನ್ನು ತೋರ್ಪಡಿಸಿಕೊಂಡನು. ಯೇಸುಕ್ರಿಸ್ತ ಪರಲೋಕಕ್ಕೆ ಏರಿ ಹೋದಂತಹ ಸಂದರ್ಭದಲ್ಲಿ ದೇವದೂತರು " ಯೇಸು ಹೇಗೆ ಪರಲೋಕಕ್ಕೆ ಏರಿ ಹೋದನೋ ಅದೇ ರೀತಿಯಾಗಿ ಹಿಂತಿರುಗಿ ಬರುತ್ತಾನೆ " ಎಂಬ ವಾಗ್ದಾನವನ್ನು ನೀಡಿದ್ದಾರೆ. (ಅಪೋಸ್ತಲರ ಕೃತ್ಯಗಳು 1:11)

ಈ ಕಾರ್ಯಗಳು ಆದ ನಂತರ ಯೇಸುವಿನ ಶಿಷ್ಯರು ಬಹಳ ಧೈರ್ಯದಿಂದ ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ, ಯಾರು ಯೇಸುವನ್ನು ಅಂಗೀಕರಿಸಿ ಅವನನ್ನೇ ಅನುಸರಿಸಿ ನಡೆಯುತ್ತಾರೋ ಅವರೆಲ್ಲಾ ರಕ್ಷಣೆ ಹೊಂದುತ್ತಾರೆ ಎಂಬ ಶುಭ ವರ್ತಮಾನ (ಸುವಾರ್ತೆ)ವನ್ನು ಎಲ್ಲಾ ಕಡೆ ಸಾರಿದರು. ಯೇಸುವಿನ ಶಿಷ್ಯರು ತಮ್ಮ ಕಾರ್ಯಗಳ ಮೂಲಕ ಯೇಸುಕ್ರಿಸ್ತ ಮರಣದ ಅವಸ್ಥೆಯಲ್ಲಿ ಇಲ್ಲ ಎಂಬುದನ್ನು ಯೆಹೂದ್ಯರಿಗೆ ಮತ್ತು ಎಲ್ಲಾ ಜನರಿಗೆ ತಮ್ಮ ಮಹತ್ಕಾರ್ಯಗಳ ಮೂಲಕ, ರೋಗಗಳನ್ನು ವಾಸಿಮಾಡುವುದರ ಮೂಲಕ ಮತ್ತು ತಮ್ಮ ಎಲ್ಲಾ ಕಾರ್ಯಗಳ ಮೂಲಕ ತೋರಿಸಿಕೊಟ್ಟರು.

***ಕ್ರೈಸ್ತ ಧರ್ಮದ ಹರಡುವಿಕೆ :***

ಹೊಸ ಒಡಂಬಡಿಕೆಯ ಅಪೋಸ್ತಲರ ಕೃತ್ಯಗಳು ಎಂಬ ಪುಸ್ತಕದಲ್ಲಿ - ಹೇಗೆ ಕ್ರೈಸ್ತ ಧರ್ಮವು ರೋಮ್ ಸಾಮ್ರಾಜ್ಯದಾದ್ಯಂತ ಹರಡಿತು ಎಂಬುದರ ಬಗ್ಗೆ ತಿಳಿಸುತ್ತದೆ ಮತ್ತು ಹಲವಾರು ಪಟ್ಟಣಗಳಲ್ಲಿ ಒಂದೇ ನಂಬಿಕೆಯ ಸಮೂಹದವರು ಹೇಗೆ ಸೇರುತ್ತಿದ್ದರು ಎಂಬುದನ್ನು ತಿಳಿಸಿದೆ. ಹೊಸ ಒಡಂಬಡಿಕೆಯ ಬಹುಪಾಲು ಪುಸ್ತಕಗಳು ಯೇಸುವಿನ ಶಿಷ್ಯರು ಪತ್ರಿಕೆಗಳ ಮೂಲಕ ದೇವರ ವಿಷಯವನ್ನು ಬೋಧನೆ ಮಾಡಿರುವಂತವುಗಳಾಗಿವೆ ; ಮತ್ತು ಈ ಪತ್ರಿಕೆಗಳು ನಾವು ದೇವರ ಮಾರ್ಗದಲ್ಲಿ

ನಡೆಯಲು ಸಹಕಾರಿಗಳಾಗಿವೆ. ಅವುಗಳೆಂದರೆ, ರೋಮಾಪುರದವರಿಗೆ ಬರೆದ ಪತ್ರಿಕೆ, ಕೊರಿಂಥದವರಿಗೆ ಬರೆದ 1 ಮತ್ತು 2ನೇ ಪತ್ರಿಕೆಗಳು, ಗಲಾತ್ಯದವರಿಗೆ, ಎಫೆಸದವರಿಗೆ ಮತ್ತು ಫಿಲಿಪ್ಪಿಯವರಿಗೆ ಇತ್ಯಾದಿ., ಈ ಪತ್ರಿಕೆಗಳು ಯೆಹೂದ್ಯ ಮತದಿಂದ ಕ್ರಿಸ್ತನವನಾಗಿ ಪರಿವರ್ತನೆ ಹೊಂದಿದಂತ ಪೌಲನು ಬರೆಯಲ್ಪಟ್ಟ ಪತ್ರಿಕೆಗಳಾಗಿವೆ.

ಯೇಸುವಿನ ಶಿಷ್ಯರ ಬೋಧನೆಯಲ್ಲಿ ತಿಳಿದು ಬರುವಂತಹ ಬಹು ಮುಖ್ಯ ವಿಷಯವೆಂದರೆ - ದೇವರ ಉದ್ದೇಶ ಮತ್ತು ರಕ್ಷಣೆ ಕೇವಲ ಯೆಹೂದ್ಯರಿಗೆ ಮಾತ್ರವಲ್ಲ, ಪ್ರಪಂಚದ ಎಲ್ಲಾ ಮಾನವರಿಗೂ ರಕ್ಷಣೆಯಾಗಬೇಕು ಎಂಬುದಾಗಿದೆ. ದೇವರ ಸಂದೇಶವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು ಮತ್ತು ತಮ್ಮ ಪಾಪ ಕಾರ್ಯಗಳಿಗೆ ಪಶ್ಚಾತ್ತಾಪ ಪಟ್ಟು ಯೇಸುವಿನ ಹೆಸರಿನಲ್ಲಿ ತಮ್ಮ ಪಾಪ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು ಎಂಬುದೇ ಆಗಿದೆ. ಯೇಸುವಿನ ಶಿಷ್ಯರು ದೇವರ ರಾಜ್ಯವನ್ನು ಕುರಿತು ಸುವಾರ್ತೆಯನ್ನು ಸಾರಿದರು. ಮತ್ತು ದೇವರು ಅಬ್ರಹಾಮ ಮತ್ತು ಇತರ ಎಲ್ಲಾ ನಂಬಿಕಸ್ಥರಿಗೆ ಮಾಡಿರುವ ವಾಗ್ದಾನವನ್ನು ನೆರವೇರುಸುತ್ತಾನೆ ಎಂಬ ವಿಷಯಗಳನ್ನು ಭೋದನೆ ಮಾಡಿದರು.

ಹಲವಾರು ಜನರು ದೇವರ ರಾಜ್ಯದ ವಿಷಯವಾದ ಸುವಾರ್ತೆಯನ್ನು ನಂಬಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಅವರು ಸಂಪೂರ್ಣವಾಗಿ ನೀರಿನಲ್ಲ ಮುಳುಗಿ ದೀಕ್ಷಾಸ್ನಾನ ಪಡೆದುಕೊಂಡರು. ಈ ಕಾರ್ಯ ನಾವು ಯೇಸುಕ್ರಿಸ್ತನ ಮರಣದಲ್ಲಿ ಪಾಲುದಾರರರಾಗಿರುವುದನ್ನು ತೋರಿಸುವ ಸಂಕೇತವಾಗಿದೆ. ಮತ್ತು ಹೊಸ ಜೀವಿತದಿಂದ ಮೇಲಕ್ಕೆ ಬರುವುದನ್ನು ಸೂಚಿಸುತ್ತದೆ. ಯೇಸು ಕ್ರಿಸ್ತ ಸ್ವತಃ ತನ್ನ ಶಿಷ್ಯರಿಗೆ - ದೇವರ ರಾಜ್ಯದ ಸುವಾರ್ತೆಯನ್ನು ಜಗತ್ತಿನಾದ್ಯಂತ ಸಾರಿರಿ ಮತ್ತು ನಂಬಿ ಬಂದವರಿಗೆ ದೀಕ್ಷಾಸ್ನಾನ ಮಾಡಿಸಿ ಎಂಬ ಆಜ್ಞೆಯನ್ನು ಕೊಟ್ಟಿದ್ದಾನೆ.

***ಸತ್ಯವೇದದ ಕೊನೆಯ ಪುಸ್ತಕ :***

ಪ್ರಕಟನೆಯ ಪುಸ್ತಕವು ಸತ್ಯವೇದದಲ್ಲಿ ಕೊನೆಯ ಪುಸ್ತಕವಾಗಿದೆ. ಇದರಲ್ಲಿ

ದೇವರು ಮತ್ತು ಯೇಸು ಕ್ರಿಸ್ತ ಮೊದಲ ಶತಮಾನದ ಏಳು ಸಭೆಗಳಿಗೆ ಕೊಟ್ಟಿರುವ ಸಂದೇಶವನ್ನು ತಿಳಿಸಿದೆ. ಜೊತೆಗೆ ಈ ಪುಸ್ತಕದಲ್ಲಿ ಮುಂದೆ ಸಂಭವಿಸುವ ಸಂಗತಿಗಳನ್ನು ಗುರುತು ಮತ್ತು ಸಂಕೇತಗಳ ಮೂಲಕ ತಿಳಿಸಿದೆ. ಹಳೆಯ ಒಡಂಬಡಿಕೆಯಲ್ಲಿ ತಿಳಿಸಿರುವಂತಹ ಉದಾಹರಣೆಗಳ ಮೂಲಕ ಮುಂದೆ ಸಂಭವಿಸುವ ಸಂಗತಿಗಳನ್ನು ಪ್ರಕಟಿಸಲಾಗಿದೆ.

ಪ್ರಕಟನೆ ಪುಸ್ತಕದ ನಂತರ ಸತ್ಯವೇದ ಮುಕ್ತಾಯಗೊಳ್ಳುತ್ತದೆ. ಸತ್ಯವೇದವನ್ನು ಬಿಟ್ಟರೆ ದೇವರ ಮುಖಾಂತರ ಬಂದಂತಹ ಬೇರೆ ಗ್ರಂಥವಿಲ್ಲ. ಶಾಶ್ವತ ಮರಣದಿಂದ ರಕ್ಷಣೆ ಪಡೆಯಲು ಇರುವ ಒಂದೇ ಮಾರ್ಗವೆಂದರೆ ಅದು ಸತ್ಯವೇದದ ಮೂಲಕ ಮಾತ್ರ. (ಅಪೋಸ್ತಲರ ಕೃತ್ಯಗಳು 4:12 ಮತ್ತು 16:30-31) ಸತ್ಯವೇದವು ಎಲ್ಲಾ ಜನಾಂಗದವರಿಗೆ, ಎಲ್ಲಾ ಬಣ್ಣದವರಿಗೆ, ಎಲ್ಲಾ ಸಂಸ್ಕೃತಿಯವರಿಗೆ, ಬಡವರಿಗೆ, ಶ್ರೀಮಂತರಿಗೆ, ಪುರುಷ ಮತ್ತು ಸ್ತ್ರೀಯರಿಗೆ, ಯುವಕರಿಗೆ ಮತ್ತು ವೃದ್ಧರಿಗೆ, ಎಲ್ಲರಿಗಾಗಿ ಇರುವ ಗ್ರಂಥವಾಗಿದೆ. ಸತ್ಯವೇದದಲ್ಲಿ ಜೀವ ವಾಕ್ಯಗಳಿವೆ ಹಾಗೂ ನಿಜವಾಗಿಯೂ ಸತ್ಯವೇದವು ನಮ್ಮ ಜೀವಿತವನ್ನು ಬದಲಾಯಿಸುವ ಗ್ರಂಥವಾಗಿದೆ.

***ಸತ್ಯವೇದ ಏಕೆ ಬರೆಯಲ್ಪಟ್ಟಿತು ?***

ಸತ್ಯವೇದವು ಬಹಳ ವಿಶೇಷವಾದ ಪುಸ್ತಕವಾಗಿದೆ. ಅದು ನಾಲ್ಕು ಸಾವಿರ ವರ್ಷಗಳಷ್ಟು ಹಳೆಯದಾಗಿದೆ. ನೂರಾರು ಭಾಷೆಗಳಿಗೆ ಅನುವಾದಿಸಲ್ಪಟ್ಟಿದೆ. ಸತ್ಯವೇದದ ಪುರಾತನ ಪ್ರತಿಗಳು ಸಂಶೋಧನೆಗಳಲ್ಲಿ ದೊರಕಿವೆ. ಇತ್ತೀಚಿನ ಪ್ರತಿಗಳಿಗೂ ಪುರಾತನ ಪ್ರತಿಗಳಿಗೂ ಹೋಲಿಸಿದಾಗ ಅವುಗಳ ವಾಕ್ಯಗಳಲ್ಲಿ ಸ್ವಲ್ಪವೂ ಬದಲಾವಣೆ ಆಗದಿರುವುದು ಕಂಡು ಬರುತ್ತದೆ.

ದೇವರು ಸತ್ಯವೇದವನ್ನು ಏಕೆ ಬರೆಸಿದ್ದಾನೆ ಎಂದರೆ - ಆತನನ್ನು ನಾವು ತಿಳಿಯಬೇಕೆಂಬ ಉದ್ದೇಶದಿಂದ ದೇವರು ಸತ್ಯವೇದವನ್ನು ಕೊಟ್ಟಿದ್ದಾನೆ. ಏಕೆಂದರೆ ಮಾನವರು ತಮ್ಮ ಜ್ಞಾನ, ಅಧಿಕಾರಕ್ಕೆ ಹೆಚ್ಚಳ ಪಡುವುದು ದೇವರಿಗೆ ಇಷ್ಟವಾದುದಲ್ಲ,

ದೇವರನ್ನು ತಿಳಿಯುವುದೇ ಅತ್ಯಂತ ವಿಶೇಷವಾದ ಹೆಚ್ಚಳವಾಗಿದೆ.

"ಹೆಚ್ಚಳ ಪಡುವವನು ತಾನು ನನ್ನನ್ನು ತಿಳಿದು ಲೋಕದಲ್ಲಿ ಪ್ರೀತಿ ನ್ಯಾಯಗಳನ್ನು ತೋರ್ಪಡಿಸುವ ಯೆಹೋವನಾಗಿರುವೆನು ಎಂದು ಗ್ರಹಿಸಿಕೊಂಡಿದ್ದೇನೆ ಎಂಬುದಕ್ಕೆ ಹೆಚ್ಚಳ ಪಡಲಿ" (ಯೆರೆಮೀಯ 9:24).

ಮಾನವರು ತಮ್ಮ ಮಾರ್ಗಗಳನ್ನು ಬಿಟ್ಟು ತನ್ನ ಕಡೆಗೆ ತಿರುಗಿ ಕೊಳ್ಳಬೇಕು ಎಂದು ದೇವರು ಆಶಿಸುತ್ತಾನೆ. ಮಾನವರಲ್ಲಿ ಯಾರು ದೇವರಲ್ಲಿ ನಂಬಿಕೆ ಇಡುತ್ತಾರೊ, ಮತ್ತು ದೇವರಲ್ಲಿ ಸ್ಥಿರವಾಗಿರುತ್ತಾರೊ ಅಂತಹವರನ್ನು ದೇವರು ಗಮನಿಸುತ್ತಾನೆ. ಅಂತವರಿಗೆ ದೇವರು, ಮಾನವರನ್ನು ಕುರಿತು ತನ್ನ ಉದ್ದೇಶ ಮತ್ತು ಯೋಜನೆಗಳೇನು ಎಂಬುದನ್ನು ತನ್ನ ವಾಕ್ಯಗಳ ಮೂಲಕ ಈ ಗ್ರಂಥದಲ್ಲಿ (ಸತ್ಯವೇದ) ತಿಳಿಸಿದ್ದಾನೆ. ಯಾರು ತಮ್ಮನ್ನು ಬದಲಾಯಿಸಿಕೊಂಡು ದೇವರ ಕಡೆಗೆ ತಿರುಗುತ್ತಾರೋ ಅವರಿಗೆ ರಕ್ಷಣೆ ಕೊಡುತ್ತಾನೆ. ಮತ್ತು ಭೂಮಿಯ ಮೇಲೆ ಶಾಶ್ವತವಾಗಿ ಜೀವಿಸುವಂತೆ ನಿತ್ಯ ಜೀವ ಕೊಡುತ್ತಾನೆ.

***ರಕ್ಷಣೆ ಹೊಂದಲು ನಾನು ಏನು ಮಾಡಬೇಕು ?***

ಯೇಸು ಕ್ರಿಸ್ತ ಪರಲೋಕಕ್ಕೆ ಏರಿ ಹೋದ ನಂತರ, ಆತನ ಶಿಷ್ಯರು ಯೆರುಸಲೇಮಿನಲ್ಲಿ ಯೆಹೂದ್ಯರಿಗೆ- ದೇವರ ಮಗನನ್ನು ದಂಡನೆಗೆ ಗುರಿ ಪಡಿಸಿದ್ದಕ್ಕಾಗಿ ಪಶ್ಚಾತ್ತಾಪ ಪಡಿರಿ ಮತ್ತು ನಿಮ್ಮ ಪಾಪ ಕಾರ್ಯಗಳನ್ನು ಬಿಡಿರಿ ಎಂದು ಸಾರಿದರು. ಮತ್ತು ಹಲವಾರು ಮಂದಿ ಯೆಹೂದ್ಯರು ಈ ವಿಷಯವನ್ನು ತಿಳಿದು ತಮ್ಮನ್ನು ತಿದ್ದಿಕೊಂಡು ಯೇಸುವಿನ ಶಿಷ್ಯರ ಬಳಿಗೆ ಬಂದು "ನಾವು ಏನು ಮಾಡಬೇಕು" (ಅಪೊಸ್ತಲರ ಕೃತ್ಯಗಳು 2:37-38) ಎಂದು ಕೇಳಿದರು.

ಉತ್ತರ ಬಹಳ ಸ್ಪಷ್ಟವಾಗಿದೆ ಮತ್ತು ಸರಳವಾಗಿದೆ. ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂಬುದೇ ಆಗಿದೆ.

ಇನ್ನೊಂದು ಕಡೆ ಮತ್ತೊಬ್ಬ ಹೀಗೆ ಕೇಳುತ್ತಾನೆ. " ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿಯೇನು? " (ಅ.ಕೃ.8:36-38). ಉತ್ತರ ಹೀಗಿದೆ - ನೀನು ಮನಃಪೂರ್ವಕವಾಗಿ ನಂಬುವುದಾದರೆ ಎಂಬುವುದಾಗಿದೆ.

ಈ ಮೇಲಿನ ವಿಷಯಗಳು ನಮಗೆ ಇಂದಿಗೂ ಅನ್ವಯವಾಗುತ್ತವೆ. ಸತ್ಯವೇದವನ್ನು ಓದುವುದರ ಮುಖಾಂತರ ನಾವು ನಿಜವಾಗಿಯೂ ಮತ್ತು ಸತ್ಯವಾಗಿಯೂ ಜೀವವುಳ್ಳ ದೇವರನ್ನು ತಿಳಿಯುವುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಹೇಗೆ ಆರಂಭದಲ್ಲಿ ದೇವರು ಆದಾಮ ಮತ್ತು ಹವ್ವಳಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿದ್ದನೋ, ಅದೇರೀತಿಯಾಗಿ ಇಂದು ದೇವರು ಆಯ್ಕೆಯನ್ನು ನಮ್ಮ ಮುಂದೆ ಇಟ್ಟಿದ್ದಾನೆ. ಆದ್ದರಿಂದ ನಾವು ಆತನ ಸಂದೇಶವನ್ನು ಕೇಳಿ, ಓದಿ, ಅರ್ಥಮಾಡಿಕೊಂಡು, ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ನಮ್ಮನ್ನು ನಾವು ಆತನಿಗೆ ಅರ್ಪಣೆ ಮಾಡಿಕೊಂಡರೆ ರಕ್ಷಣೆ ಸಿಗುತ್ತದೆ. ಆದರೆ ನಾವು ಮೊದಲ ಮಾನವರಂತೆ ದೇವರ ವಾಕ್ಯವನ್ನು ತಿರಸ್ಕರಿಸಿದರೆ ನಿತ್ಯ ನಾಶನಕ್ಕೆ (ಮರಣ) ಪಾತ್ರರಾಗುತ್ತೇವೆ.

ಆದ್ದರಿಂದ ಸತ್ಯವೇದವನ್ನು ಸರಿಯಾದ ರೀತಿಯಲ್ಲಿ ಓದುವಂತವರಾಗಿರಿ. ಸತ್ಯವೇದದ ದೈನಂದಿನ ಪಠಣದ ತಃಖ್ತೆ (Bible Reading Planner) ಯನ್ನು ಉಚಿತವಾಗಿ ಪಡೆಯಲು ಈ ಪುಸ್ತಕದ ರಕ್ಷಾಪುಟದಲ್ಲಿರುವ ವಿಳಾಸಕ್ಕೆ ಬರೆಯಿರಿ. ಪ್ರತಿ ದಿನವೂ ಸತ್ಯವೇದದ ಅಧ್ಯಯನಕ್ಕೆ ಸಮಯವನ್ನು ಮೀಸಲಾಗಿ ಇಡಿ. ಇದರಿಂದ ನಿಮ್ಮ ಜೀವಿತವನ್ನು ಉತ್ತಮವಾಗಿ ಬದಲಾಯಿಸಲು ಸಾಧ್ಯವಾಗುತ್ತದೆ.

ದೇವರು ನಿಮ್ಮನ್ನು ತನ್ನ ಮಕ್ಕಳಲ್ಲಿ ಒಬ್ಬನಾಗಲು ಕರೆದಿದ್ದಾನೆ. ನೀವು ಆ ಕರೆಗೆ ಓಗೊಡುವುದಿಲ್ಲವೇ ?

- ಮೈಕ್ ಬುಲ್

## ಪ್ರಶ್ನೆಗಳು

1. ಸತ್ಯವೇದವನ್ನು ಯಾರು ಬರೆದಿದ್ದಾರೆ ?
2. ನೀವು ಸತ್ಯವೇದವನ್ನು ನಂಬುವುದಕ್ಕೆ ಎರಡು ಕಾರಣ ಕೊಡಿರಿ ?
3. ಸತ್ಯವೇದದ ಮೊದಲ ಪುಸ್ತಕದ ಹೆಸರೇನು ?
4. ಯಾಕೋಬನ ಸಂತತಿಯವರ ದೇಶದ ಹೆಸರೇನು ?
5. ಕೀರ್ತನೆಗಳು ಎಂದರೆ ಯಾವುವು ?
6. ಪ್ರವಾದನೆ ಎಂದರೆ ಏನು ?
7. ಯೇಸುವಿನ ಜನನದ ಬಗ್ಗೆ ಯಾವ ಯಾವ ಪುಸ್ತಕಗಳಲ್ಲಿ ತಿಳಿಸಿದೆ ?
8. ಯೇಸುವಿನ ಯಾವ ಕಾರ್ಯ ವಿಶೇಷವಾಗಿದೆ ?
9. ದೇವರು ಸತ್ಯವೇದವನ್ನು ಏಕೆ ಕೊಟ್ಟಿದ್ದಾನೆ ?
10. ರಕ್ಷಣೆ ಹೊಂದಲು ನಾವು ಏನು ಮಾಡಬೇಕು ?

Please write to the address below for

# Free monthly Bible magazine
# Bible corespondence course
# Details of local Bible seminars

For Karnataka, Kerala & Tamilnadu :
**The Christadelphians, P.O. Box 535, Frazer Town, Bangalore 560005. India**
Elsewhere:
**Printland Publishere, GPO Box 159, Hyderabad A.P 500001, India**